# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:237 • ನೋಂದಣಿ ನಂ.:KARKAN27911 • ವಿಜಯನಗರ • 14.02.2024 • ಬುಧವಾರ • ಪುಟ:04 • ಬೆಲೆ:2
Volume:01 • Issue:237 • Reg.No:KARKAN27911 • VIJAYANAGARA • 14.02.2024 • Wednesday • Page:04 • Rs:2







ಮೈಕ್ರೋ ನ್ಯೂಸ್

## ಫೆ.15 ರಂದು ಹೊಸಪೇಟೆ ಕೊಟ್ಟೂರುಸ್ವಾಮಿ ಮಠದಲ್ಲಿ ಶಿವಾನುಭವ ಸಂಪದ-1160

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ ದಲ್ಲಿ ಫೆ.15 ರಂದು ಸಂಜೆ 7 ಗಂಟೆಗೆ ಶಿವಾನುಭವ ಸಂಪದ–1160 ನಡೆಯಲಿದೆ.

ಶ್ರೀ ಜಗದ್ಗುರು ಕೊಟ್ಟೂರು ಬಸವ ಲಿಂಗಮಹಾ ಸ್ವಾಮಿಗಳು ಸಾನ್ನಿಧ್ಯವಹಿಸುವರು. ಕನ್ನಡ ವಿವಿ ಪ್ರಾಧ್ಯಾಪಕ ಡಾ.ಕೆ.ರವೀಂದ್ರನಾಥ ಉಪನ್ಯಾಸ ನೀಡಲಿದ್ದಾರೆ. ಹೊಸಪೇಟೆ ನೂತನ ತಹಶೀಲ್ದಾರ್‌ರಾಗಿ ಆಗಮಿಸಿರುವ ಶೃತಿ ಎಂ.ಮಳ್ಳಪ್ಪಗೌಡ ಇವರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಆರ್ಯವೈಶ್ಯ ಸಮಾಜದ ಮಾಜಿ ಅಧ್ಯಕ್ಷ ಭೂಪಾಳ ರಾಘವೇಂದ್ರಶೆಟ್ರು, ಹೊಸಪೇಟೆ ಬ್ರಾಹ್ಮಣ ಸಂಘದ ಅಧ್ಯಕ್ಷ ಕೆ.ದಿವಾಕರ, ಅಖಿಲ ಕರ್ನಾಟಕ ಬ್ರಾಹ್ಮಣರ ಮಹಾಸಭಾದ ನಿರ್ದೇಶಕ ಹೆಚ್.ಉಮೇಶ, ಶ್ರೀ ಆದಿನಾಥ ಜೈನ್ ಶ್ವೇತಾಂಬರ ಸಂಘದ ಅಧ್ಯಕ್ಷ ಕೇಸರಿಮಲ್ ಜೈನ ಉಪಸ್ಥಿತರಿರಲಿದ್ದಾರೆ. ಸದ್ಭಕ್ತರು ಸಕಾಲಕ್ಕೆ ಆಗಮಿಸಿ ಶಿವಾನುಭವದ ಪ್ರಯೋಜನ ಪಡೆಯಬೇಕೆಂದು ಕೊಟ್ಟೂರುಸ್ವಾಮಿ ಸಂಸ್ಥಾನ ಮಠ ತಿಳಿಸಿದೆ.

# ಸಂವಿಧಾನ ಜಾಗೃತಿಗೆ ಅಭೂತಪೂರ್ವ ಬೆಂಬಲ

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ವಿಜಯನಗರ ಜಿಲ್ಲೆಯಲ್ಲಿ ಸಂವಿಧಾನ ಮೌಲ್ಯಗಳ ಸ್ಮರಣೆ | ವಿವಿಧ ಕಲಾ ಪ್ರದರ್ಶನ, ರ‍್ಯಾಲಿಗಳ ಮೂಲಕ ವಿಶೇಷ ಜಾಗೃತಿ

**ಹಂಪಿ ಟೈಮ್ಸ್ ಹೊಸಪೇಟೆ**
ರಾಜ್ಯಾದ್ಯಂತ ಜನವರಿ 26ರಿಂದ ಪ್ರಾರಂಭಗೊಂಡ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ವಿಜಯನಗರ ಜಿಲ್ಲೆಯಲ್ಲಿ ಉತ್ತಮ ಸ್ಪಂದನೆ ದೊರೆಯುವುದರ ಜೊತೆಗೆ ಸಾರ್ವಜನಿಕರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್ ದಿವಾಕರ್ ರವರು ಹೇಳಿದರು.



ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಕುರಿತು ಮಾಹಿತಿ ನೀಡಲು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರದಂದು ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಭಾರತ ದೇಶವು ಜನವರಿ 26ರಂದು 75ನೇ ಗಣರಾಜ್ಯೋತ್ಸವನ್ನು ಆಚರಿಸಿದ್ದು, ಇದರ ಭಾಗವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸಂವಿಧಾನದ ಆಶಯಗಳನ್ನು ಈಡೇರಿಸುವ ಹಾಗೂ ಸಮ ಸಮಾಜವನ್ನು ನಿರ್ಮಿಸುವ ದೆಯೋದ್ದೇಶವನ್ನು ಇಟ್ಟುಕೊಂಡು "ಸಂವಿಧಾನ ಜಾಗೃತಿ ಜಾಥಾ" ಎಂಬ ರಾಷ್ಟ್ರೀಯ ಮಟ್ಟದ ಸಮಾವೇಶವನ್ನು ಆಯೋಜಿಸಿದೆ. ಈ ಕಾರ್ಯಕ್ರಮದಡಿ ಇಲ್ಲಿಯವರೆಗೂ ವಿಜಯನಗರ ಜಿಲ್ಲೆಯಲ್ಲಿನ ಒಟ್ಟು 84 ಗ್ರಾಮ ಪಂಚಾಯತಿ ಹಾಗೂ 5 ನಗರಾಡಳಿತ ಪ್ರದೇಶದಲ್ಲಿ ಜಾಥಾ ಸಂಚರಿಸಿದ್ದು, ರೂಟ್ ಮ್ಯಾಪ್‌ನ ಶೇ.61.37% (1300 ಕಿ.ಮೀ) ರಷ್ಟು ಜಾಥವು ಪೂರ್ಣಗೊಳಿಸಿದೆ. ಎಲ್.ಇ.ಡಿ ಮೌಂಟೆಂಡ್ ಡಿಸ್‌ಪ್ಲೇ ಮೂಲಕ ಸಂವಿದಾನದ ಮಹತ್ವ, ರಾಜ್ಯನಿರ್ದೇಶಕ ತತ್ವಗಳು, ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಡಾ.ಬಿ.ಆರ್ ಅಂಬೇಡ್ಕರ್ ರವರ ಪರಿಕಲ್ಪನೆ, ಬಸವಣ್ಣನವರ ವಚನಗಳು, ಮೂಲಭೂತ ಹಕ್ಕುಗಳು ಮತ್ತ ಕರ್ತವ್ಯಗಳ ಬಗ್ಗೆ ಸಾರ್ವಜನಿಕರಿಗೆ ಮುಖ್ಯವಾಗಿ ಯುವಜನರಿಗೆ ಜ.26 ರಿಂದ ಫೆ.23ರ ವರೆಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ವಿವಿಧ ಕಲಾ ಪ್ರದರ್ಶನ, ರ‍್ಯಾಲಿಗಳ ಮೂಲಕ ವಿಶೇಷ ಜಾಗೃತಿ: ಜಿಲ್ಲೆಯಲ್ಲಿ 48 ಸೈಕಲ್ ರ‍್ಯಾಲಿ, 37 ಮೊಟಾರ್ ಬೈಕ್ ರ‍್ಯಾಲಿ, 17 ಹೀಲಿಯಂ ಬಲೂನ್ಸ್, 25 ಬಂಡಿ ರ‍್ಯಾಲಿ, 18 ಟ್ರ್ಯಾಕ್ಟರ್ ರ‍್ಯಾಲಿ, 29 ಕ್ಯಾಂಡಲ್ ಮಾರ್ಚ್ ಹಾಗೂ ಡೊಳ್ಳು, ಕಹಳೆ, ನಂದಿಕೋಲು ಕುಣಿತ, ತಮಟೆ, ತಾಷಾರಾಂ ಡೋಲು ಹಾಗೂ ಮುಂತಾದ ಕಲಾತಂಡಗಳ ಪ್ರದರ್ಶನ ಮೂಲಕ ವಿಶೇಷ ಜಾಗೃತಿ ಮೂಡಿಸಲಾಗುತ್ತಿದ್ದೆ. ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆಯ 1ಲಕ್ಷಕ್ಕೂ ಅಧಿಕ ಹಸ್ತಪ್ರತಿಗಳನ್ನು ಜಿಲ್ಲೆಯ ಸಾರ್ವಜನಿಕರಿಗೆ ವಿತರಣೆ ಮಾಡಲಾಗಿದ್ದು, ಈ ಮೂಲಕ ಜಿಲ್ಲೆಯಲ್ಲಿ ಸಂವಿಧಾನ ಮೌಲ್ಯಗಳ ಸ್ಮರಣೆ ಮಾಡಲಾಗುತ್ತಿದೆ. ರಾಜ್ಯಾದ್ಯಂತ ನಡೆಯುತ್ತಿರುವ ಸಂವಿಧಾನ ಜಾಗೃತಿ ಕಾರ್ಯಕ್ರಮದಡಿ ವಿಜಯನಗರ ಜಿಲ್ಲೆಗೆ ಉತ್ತಮ ಶ್ರೇಯಾಂಕ ದೊರೆಯುತ್ತಿದೆ ಎಂದು ಹೇಳಿದರು.

ಪ್ರತಿ ಗ್ರಾಮ ಪಂಚಾಯತಿಯ ವೇದಿಕೆಯ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಸಂಘ–ಸಂಸ್ಥೆಗಳ ಮುಖಂಡರು ಭಾಗವಹಿಸಿದ್ದು ಶಾಲಾ ಮಕ್ಕಳಿಂದ ನಾಟಕ ಹಾಗೂ ಪ್ರಭಂಧ ಮತ್ತು ಚರ್ಚಾಸ್ಪರ್ಧೆಗಳನ್ನು ಏರ್ಪಡಿಸಿ, ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾ ಸಾಗಿದೆ. ಸಂವಿಧಾನ ಜಾಗೃತಿ ಜಾಥವು ಪ್ರಸ್ತುತ ಹರಪ್ಪನಹಳ್ಳಿ ತಾಲುಕಿನಲ್ಲಿದ್ದು, ಹರಪ್ಪನಹಳ್ಳಿ ಮತ್ತು ಕೊಟ್ಟೂರು ತಾಲ್ಲೂಕುಗಳಲ್ಲಿ ಸಂಚರಿಸಿ ಫೆ.24 ಮತ್ತು ಫೆ.25ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಜರುಗುವ ಬೃಹತ್ ರಾಷ್ಟ್ರೀಯ ಸಂವಿಧಾನ ಜಾಗೃತಿ ಜಾಥಾದಲ್ಲಿ ಪಾಲ್ಗೊಳ್ಳುವ ಮುಖಾಂತರ ಕೊನೆಗೊಳ್ಳಲಿದೆ. ಹಾಗಾಗಿ ತಾಲ್ಲೂಕಿನ ಎಲ್ಲಾ ಜನಪ್ರತಿನಿಧಿಗಳು, ಅಧಿಕಾರಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು, ಯುವಜನರು ಹಾಗೂ ಎಲ್ಲಾ ಸಮುದಾಯದ ಸಂಘ–ಸಂಸ್ಥೆಗಳ ಮುಖಂಡರುಗಳು ಸಂವಿಧಾನದ ಮಹತ್ವವನ್ನು ಅರಿತುಕೊಳ್ಳಲು ಈ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮತ್ತು ಇಲಾಖೆಯ ಅಧಿಕೃತ ಜಾಲತಾಣಗಳಾದ: twitter@JDSWDVNG, facebook-DDswd vijayanagara, youtube-ddswd vijayanagara, instagram-ddswdvijayanagara, whatsapp ಗಳಲ್ಲಿ ಹಂಚಿಕೊಳ್ಳಲಾದ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಛಾಯಾಚಿತ್ರ ಹಾಗೂ ವೀಡಿಯೋಗಳನ್ನು ವೀಕ್ಷಿಸಿ ತಮ್ಮ ಅಭಿಪ್ರಾಯಗಳನ್ನು ಲೈಕ್, ಶೇರ್ & ಕಮೆಂಟ್ಸ್ ಗಳ ಮೂಲಕ ವ್ಯಕ್ತಪಡಿಸಿ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಕನ್ನಡ ವಿವಿಗೆ ಜೆಸ್ಕಾಂ ಮತ್ತೆ ನೋಟೀಸ್



**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಜೆಸ್ಕಾಂ ಮತ್ತೆ ಕರೆಂಟ್ ಶಾಕ್ ನೀಡಿದೆ! ಬಾಕಿ ವಿದ್ಯುತ್ ಬಿಲ್ ಪಾವತಿಸದಿದ್ದರೆ ವಿದ್ಯುತ್ ಸರಬರಾಜು ಕಡಿತಗೊಳಿಸಲಾಗುವುದು ಎಂದು ವಿವಿಗೆ ಜೆಸ್ಕಾಂ ನೋಟಿಸ್ ನೀಡಿದೆ.

ಅನುದಾನ ಸಮಸ್ಯೆಯಿಂದ ಸಂಕಷ್ಟದಲ್ಲಿರುವ ವಿವಿಗೆ ವಿದ್ಯುತ್ ಬಿಲ್ ಬಾಕಿ ಪದೇ ಪದೇ ಕಿರಿಕಿರಿ ಉಂಟು ಮಾಡುತ್ತಿದೆ. ಸಧ್ಯ ವಿವಿಯ ಬಾಕಿ 1,05,74,695 ರೂ. ವಿದ್ಯುತ್ ಬಿಲ್ ಉಳಿದಿದೆ. ಕೆಲ ತಿಂಗಳು ಪಾವತಿಸಿದ ಮಧ್ಯೆಯೂ ಈ ಮೊತ್ತದ ಬಿಲ್ ಉಳಿದಿದೆ.

ಈಗಾಗಲೇ ಕಳೆದ ಡಿಸೆಂಬರ್ ಅಂತ್ಯದಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿತ್ತು. ಆ ಬಳಿಕ ನುಡಿಹಬ್ಬದ ಕಾರಣಕ್ಕೆ ಕಾಲಾವಕಾಶ ನೀಡಲಾಗಿತ್ತು. ಅಷ್ಟರೊಳಗೆ ಸರಕಾರದಿಂದ ಅನುದಾನ ಬಂದು ಪಾವತಿಸುವ ವಿಶ್ವಾಸದಲ್ಲಿದ್ದ ವಿವಿಗೆ ಮತ್ತೆ ವಿದ್ಯುತ್ ಶಾಕ್ ತಗುಲಿದಂತಾಗಿದೆ.

ಜೆಸ್ಕಾಂನ ಕಮಲಾಪುರ ಕಾರ್ಯ ಮತ್ತು ಪಾಲನೆ ಶಾಖೆಯ ಸಹಾಯಕ ಎಂಜಿನಿಯರ್ ಅವರು, ವಿವಿಯ ಕುಲಸಚಿವರಿಗೆ ಮಂಗಳವಾರ (ಫೆ.13) ನೋಟಿಸ್ ನೀಡಿದ್ದು, ವಿವಿಯ ವಿದ್ಯುತ್ ಸ್ಥಾವರಗಳ ಬಾಕಿ ಬಿಲ್ ಮೊತ್ತವನ್ನು ಶೀಘ್ರವಾಗಿ ಸಂಪೂರ್ಣ ವಸೂಲಾತಿ ಮಾಡಬೇಕೆಂದು ಹಿರಿಯ ಅಧಿಕಾರಿಗಳು ಆದೇಶಿಸಿರುವುದರಿಂದ ಮತ್ತೊಮ್ಮೆ ನೋಟೀಸು ಜಾರಿಯಾಗಿದ್ದು, ಕೂಡಲೇ ವಿದ್ಯುತ್ ಬಿಲ್ ಬಾಕಿ ಪಾವತಿಸಬೇಕೆಂದು ಸೂಚಿಸಿದ್ದಾರೆ.

# ಕೋಳಿ ಕೂಗಿದ್ದಕ್ಕೆ ಅರ್ಧ ಟಿಕೇಟ್ ಕೊಟ್ಟ ಕಂಡಕ್ಟರ್

### ಟಿಕೇಟ್ ತಗೋಳ್ತಿನಿ ಕೋಳಿಗೆ ಸೀಟು ಕೊಡಬೇಕು ಅಂದ್ರು ಕೋಳಿ ಮಾಲೀಕರು

**ಹಂಪಿ ಟೈಮ್ಸ್ ಕೂಡ್ಲಿಗಿ**
ಕೋಳಿಯನ್ನು ರಟ್ಟಿನ ಬಾಕ್ಸ್‌ನಲ್ಲಿಟ್ಟುಕೊಂಡು ಕೂಡ್ಲಿಗಿಯಿಂದ ಜಗಳೂರು ಕಡೆ ಪ್ರಯಾಣ ಬೆಳೆಸಿದ್ದ ಮಹಿಳೆಯ ಜಾಣತನವನ್ನು ಕೋಳಿ ಬಯಲುಮಾಡಿದೆ.

ಬಸ್ ಹೊರಡುತ್ತಿದ್ದಂತೆ ಕೋಳಿ ಕೂಗಿದೆ. ಕಂಡಕ್ಟರ್‌ಗೂ ಆಶ್ಚರ್ಯ, ಯಾರದು ಆ ಕೋಳಿ, ಟಿಕೇಟ್ ಪಡೆಯಿರಿ ಅಂದಾಗ ಅಲ್ಲಿದ್ದ ಜನರು ಕೋಳಿ ಮಾಲೀಕರತ್ತ ಬೊಟ್ಟು ಮಾಡಿದ್ದಾರೆ. ತನ್ನೊಂದಿಗೆ ಕೋಳಿ ತಂದಿದ್ದ ಆ ಮಹಿಳೆಗೆ ನಿಮಗೆ ಉಚಿತ ಆದ್ರೆ ಕೋಳಿಗೆ ಅರ್ಧ ಟಿಕೇಟ್ ಪಡೆಯಬೇಕು ಎನ್ನುತ್ತಿದ್ದಂತೆ ಆ ಮಹಿಳೆ ಕಂಡಕ್ಟರ ವಿರುದ್ಧ ಕೆಂಗಣ್ಣು ಬೀರಿದ್ದಾಳೆ. ಪ್ರಯಾಣಿಕರು ಸಾರಿಗೆ ನಿಯಮಗಳನ್ನು ಆ ಮಹಿಳೆಗೆ ತಿಳಿಹೇಳಿದರೂ ಜಗ್ಗದ ಆ ಮಹಿಳೆ ಕಂಡಕ್ಟರ್ ನೊಂದಿಗೆ ಮಾತಿನ ಚಕಮಕಿ ಮುಂದುವರೆಸಿದ್ದಾಳೆ. ಕಂಡಕ್ಟರ್ ಟಿಕೇಟ್ ಪಡೆಯಲೇ ಬೇಕು ಎಂದಾಗ ಟಿಕೇಟ್ ಪಡೆಯುವ ಸೀಟು ಕೊಡಬೇಕು ಎಂದು ಹಠಮಾಡಿದ್ದಾಳೆ. ಹೀಗೆ ಆ ಮಹಿಳೆಯ ಬಸ್ ಪ್ರಯಣ ಕೋಳಿ ಜಗಳದಲ್ಲೆ ಅಂತ್ಯಗೊಂಡಿದೆ. ಅರ್ಧ ಟಿಕೇಟ್ ಪಡೆದು ಪ್ರಯಾಣಿಸಿ ತನ್ನೂರು ಬಂದಾಗ ಇಳಿದಿದ್ದಾರೆ.



**ಘಟನೆ:** ಇಂತಹದೊಂದು ಅಪರೂಪದ ಘಟನೆ ಕೂಡ್ಲಿಗಿ ಬಸ್ ನಿಲ್ದಾಣದಲ್ಲಿ ಭಾನುವಾರ ರಾತ್ರಿ ಹಗರಿಬೊಮ್ಮನಹಳ್ಳಿ ಘಟಕದಿಂದ ಹೊಸಪೇಟೆ ಮೂಲಕ ಕೂಡ್ಲಿಗಿ, ಕೊಟ್ಟೂರು, ಜಗಳೂರು ಮಾರ್ಗವಾಗಿ ಧರ್ಮಸ್ಥಳಕ್ಕೆ ಹೋಗುವ ಮಾರ್ಗದ ಬಸ್ಸು ಕೂಡ್ಲಿಗಿ ಬಸ್ ನಿಲ್ದಾಣದಲ್ಲಿ ಬಂದು ನಿಲ್ಲುತ್ತಿದ್ದಂತೆ ಕೂಡ್ಲಿಗಿಯಿಂದ ಜಗಳೂರು ಕಡೆ ಪ್ರಯಾಣ ಬೆಳೆಸುವ ಮಹಿಳೆ ತನ್ನ ಸಂಬಂದಿಕರ ಜೊತೆ ಬಸ್ಸು ಹತ್ತಿದ್ದು ಕೈಯಲ್ಲಿದ್ದ ಬಾಕ್ಸ್‌ನ್ನು ಸೀಟಿನ ಮೇಲಿರುವ ಲಗೇಜ್ ಇಡುವ ಜಾಗದಲ್ಲಿಟ್ಟಾಗ ಬಾಕ್ಸ್ ನಲ್ಲಿದ್ದ ಕೋಳಿ ಕೂಗುವ ಸದ್ದು ಮಾಡಿತು, ಅಮ್ಮೋ.. ರೂಲ್ಸ್ ಪ್ರಕಾರ ಕೋಳಿಗೆ ಆಫ್ ಟಿಕೆಟ್ ತಗಳ್ಬೇಕು ಇಲ್ಲಾಂದ್ರೆ ಕೋಳಿ ಹಿಡಕೊಂಡು ಕೆಳಗಿಳಿ ತಾಯಿ ಅನ್ನುತ್ತಿದ್ದಂತೆ, ಮಹಿಳೆಯು ಸರಿ ಕಂಡಕ್ಟರೇ.. ಟಿಕೆಟ್ ತಗಂತೀನಿ ಆದ್ರೆ ಕೋಳಿಗಾಗಿ ಸೀಟು ಕೊಡಲೇಬೇಕು ಎಂದು ಕಂಡಕ್ಟರ್ ಜೊತೆ ವಾಗ್ವಾದಕ್ಕಿಳಿದು ಕೋಳಿ ಜಗಳ ಜೋರಾಯಿತು. ಬಸ್ಸು ಕೂಡ್ಲಿಗಿಯಿಂದ ಕೊಟ್ಟೂರು ಕಡೆಗೆ ಸಾಗಿದರೂ ಕಂಡಕ್ಟರ್ ಹಾಗೂ ಮಹಿಳೆಯ ಕೋಳಿ ಜಗಳ ನಿಲ್ಲದೆ ಸಾಗಿದ್ದು ಮಾತ್ರ ಕಂಡುಬಂದಿತು.

# ಜೆಇಇ ಪರೀಕ್ಷೆಯಲ್ಲಿ ಟಿಎಂಎಇ ವಿದ್ಯಾರ್ಥಿಗಳ ಸಾಧನೆ

### ಹರ್ಷಿಣಿ ಜೆ ಶೇ. 99.35 ಅಂಕಗಳನ್ನು ಪಡೆದು ವಿಜಯನಗರ ಜಿಲ್ಲೆಗೆ ಪ್ರಥಮ | NITಯಲ್ಲಿ ಸ್ಥಾನ ಭದ್ರಪಡಿಸಿಕೊಂಡ ನಾಲ್ವರು

**ಹಂಪಿ ಟೈಮ್ಸ್ ಹೊಸಪೇಟೆ**
ಅಖಿಲ ಭಾರತ ಮಟ್ಟದಲ್ಲಿ ನಡೆದ ಜೆಇಇ ಪರೀಕ್ಷೆ–2024 ಫಲಿತಾಂಶ ಪ್ರಕಟವಾಗಿದ್ದು, ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿಗಳು ಆಭೂತಪೂರ್ವ ಸಾಧನೆ ಮೆರೆದು ಕಾಲೇಜಿಗೆ ಹಾಗೂ ವಿಜಯನಗರ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.






ಕುಮಾರಿ ಹರ್ಷಿಣಿ ಜೆ ಶೇ. 99.35 ಅಂಕಗಳನ್ನು ಪಡೆದು ಅಗ್ರಶ್ರೇಯಾಂಕದಲ್ಲಿ ಉತ್ತೀರ್ಣವಾಗುವ ಮೂಲಕ ಇಡೀ ವಿಜಯನಗರ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಕುಮಾರ್ ಸಮೃದ್ಧ ರಾಯಕೋಟೆ 97.08, ಕುಮಾರಿ ಕವನ ಡಿ 97.01, ಕುಮಾರ್ ಆದೀಶ್ ಜಿ.ಎ 95.07, ಕುಮಾರಿ ಸಿರಿಕೃಷ್ಣ ಸಿ.ಆರ್ 82.36, ಸಾತ್ವಿಕ್ ಕುಮಾರ್ ಯಾದವ್ 82.00 ಅಂಕಗಳನ್ನು ಪಡೆದು ವಿಶೇಷ ಸಾಧನೆ ಗೈದಿದ್ದಾರೆ.

ಮೊದಲ ನಾಲ್ಕು ವಿದ್ಯಾರ್ಥಿಗಳು ತಾವು ತೆಗೆದುಕೊಂಡ ಅಂಕಗಳ ಆಧಾರದ ಮೇಲೆ ಈಗಾಗಲೇ NITಗೆ ಸ್ಥಾನ ಭದ್ರಪಡಿಸಿಕೊಂಡಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಕಾಲೇಜಿನ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾಲೇಜು ಸಂಸ್ಥಾಪಕರು, ಆಡಳಿತ ಮಂಡಳಿ ಅಧ್ಯಕ್ಷರು, ಸದಸ್ಯರು ಹಾಗೂ ರೋಜಬಡ್ ಶಾಲೆಯ ನಿರ್ದೇಶಕರಾದ ಉಷಾ ಟಿ.ಎಂ, ಸಾಧಕ ವಿದ್ಯಾರ್ಥಿಗಳ ಪಾಲಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು. ಇಂಗ್ಲಿಷ್ ವಿಭಾಗದ ಉಪನ್ಯಾಸಕರಾದ ಜ್ಯೋತಿ ನಿರ್ವಹಿಸಿದರು.

ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ಅಧ್ಯಕ್ಷರಾದ ಷ.ಬ್ರ.ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರು, ಟಿಎಂಎಇ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಟಿ.ಎಂ. ಚಂದ್ರಶೇಖರಯ್ಯ, ಟಿಎಂಎಇ ಸಂಸ್ಥೆಯ ಉಪ ಕಾರ್ಯದರ್ಶಿಗಳೂ ಹಾಗೂ ಕಾಲೇಜಿನ ಸ್ಥಾಪಕರೂ ಆದ ಟಿ.ಎಂ. ವಿಜಯಕುಮಾರ್, ಸಂಸ್ಥೆಯ ಅಧ್ಯಕ್ಷರಾದ ಎಂ.ಕೆ.ರವೀಂದ್ರ, ಆಡಳಿತ ಮಂಡಳಿಯ ನಿರ್ದೇಶಕರಾದ ಟಿ.ಎಂ. ಚಂದ್ರಶೇಖರ್, ಕಾಲೇಜಿನ ಪ್ರಾಚಾರ್ಯರಾದ ಪ್ರೊ. ವಿ.ಎಸ್. ದಯಾನಂದ ಕುಮಾರ್, ಶೈಕ್ಷಣಿಕ ವಿಭಾಗದ ಮುಖ್ಯಸ್ಥರಾದ ಪಿ.ವಿ.ಶೇಷಸಾಯಿ ಅವರು ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ವಿದ್ಯಾರ್ಥಿಗಳ ಅಮೋಘ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.




## ವಚನ ಅರಿವು

### ತಲೆ ಬೋಳಿಸಿಕೊಳ್ಳುವವರು ಭಕ್ತರಲ್ಲ

**ತಾನು ಮಾಡುವ ಭಕ್ತಿ, ಲಿಂಗದ ಉಪದೇಶವನರಿಯದ ಕಾರಣ**
**ಕಂಡ ಕಂಡ ದೈವಕ್ಕೆ ಹೋಗಿ,**
**ಮಂಡೆ ಮುಂದಲೆಯ ಕೊಟ್ಟನಾದಡೆ ಆತ ಭಕ್ತನಲ್ಲ,**
**ಆತನ ಸಂಗಡ ಹೋಗಿ ಉಪದೇಶವ ಮಾಡಿದಾತನು ಗುರುವಲ್ಲ.**
**ಅಂಥವರ ಮನೆಯಲ್ಲಿ ಹೊಕ್ಕು ಉಂಬಾತ ಜಂಗಮವಲ್ಲ.**
**ಈ ಭಕ್ತ ಜಂಗಮದ ಭೇದವೆಂತೆಂದಡೆ;**
**ಒಡಲ ಕಿಚ್ಚಿಗೆ ಹೋಗಿ ತುಡುಗುಣಿ ನಾಯಿ ಹೊಕ್ಕು,**
**ತನ್ನ ಒಡಲ ಹೊರೆದಂತಾಯಿತ್ತಯ್ಯ ಎಂದು**
**ಪೊಡವಿಯೊಳಗೆ ಡಂಗುರವನಿಕ್ಕಿ ಸಾರಿದಾತ ನಮ್ಮ ಅಂಬಿಗರ ಚೌಡಯ್ಯ.**

**– ಅಂಬಿಗರ ಚೌಡಯ್ಯ**

ಲಿಂಗ ಧರಿಸಿ ಲಿಂಗವಂತನಾದ ಬಳಿಕ ತಮ್ಮ ಭಕ್ತಿಯನ್ನು ಇಷ್ಟಲಿಂಗಕ್ಕೆ ಮಾತ್ರ ಮೀಸಲಾಗಿರಿಸಿಕೊಂಡು ಬದುಕಬೇಕು. ಅದು ಶರಣತತ್ವದ ಆಚಾರ ನಿಷ್ಠೆಯಾಗಿದೆ. ಲಿಂಗಧರಿಸಿ ಮತ್ತೆ ಕಂಡ ಕಂಡ ದೇವರ, ಗುಡಿ ಗುಂಡಾರಗಳಿಗೆ ಹೋಗಿ ಅಡ್ಡಬಿದ್ದು ನಡೆದುಕೊಂಡರೆ, ಹರಕೆಯನ್ನು ಹೊತ್ತುಕೊಂಡು ತಲೆ ಕೂದಲನ್ನು ಬೋಳಿಸಿಕೊಂಡು ಬರುವವರು ಭಕ್ತರಲ್ಲ. ಇಂತಹವರ ಸಂಗವನ್ನು ಮಾಡಿ ಅವರ ಜೊತೆಗೆ ಹೋಗಿ ಅವರಿಗೆ ಶರಣತತ್ವವನ್ನು, ಲಿಂಗನಿಷ್ಠೆಯನ್ನು, ನಿಜಭಕ್ತಿಯ ಆಚಾರವನ್ನು ತಿಳಿಸದೆ ಸರಿದಾರಿಗೆ ತರದೆ, ಅವರಂತೆ ಹೆಜ್ಜೆ ಹಾಕಿ ಹೊಟ್ಟೆ ಹೊರೆಯುವವನು ನಿಜವಾದ ಗುರುವಲ್ಲ. ಬೇರೆ ಬೇರೆ ದೇವತೆಗಳನ್ನು ಆರಾಧಿಸುವ, ಪೂಜಿಸುವ, ಶರಣತತ್ವದ ಮೇಲೆ ನಿಷ್ಠೆ ಇಲ್ಲದವರ ಮನೆಯಲ್ಲಿ ಊಟ ಮಾಡಿದರೆ ಅದು ಪ್ರಸಾದ, ದಾಸೋಹ ವಲ್ಲ. ಅವರನ್ನು ತಿದ್ದಿ ಶರಣತತ್ವವನ್ನು ತಿಳಿಸಿ ಶುದ್ಧ ಭಕ್ತರನ್ನಾಗಿ ಮಾಡುವವನು ನಿಜವಾದ ಜಂಗಮ. ಅವರವರ ಅನುಕೂಲಕ್ಕೆ ತಕ್ಕಂತೆ ಬೋಧಿಸಿದಾತ ಜಂಗಮನಲ್ಲ. ನಿಷ್ಠೆ ಇಲ್ಲದ ಭಕ್ತರ ಮನೆಗೆ ಬೇಕಾಬಿಟ್ಟಿ ಹೋಗುವ ಜಂಗಮರು ಹೊಟ್ಟೆಯ ಕಿಚ್ಚಿಗೆ, ಹಸಿವಿಗೆ ಹೋಗಿ ಹೊಟ್ಟೆ ತುಂಬಿಸಿಕೊಂಡು ಬರುವ ಕಳ್ಳನಾಯಿಯಂತೆ ಎನ್ನುತ್ತಾನೆ ಅಂಬಿಗರ ಚೌಡಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

# ಪ್ರೀತಿ ಮನಸುಗಳ ಮಿಲನ... ದೇಹಗಳದ್ದಲ್ಲ...

## ಪ್ರೇಮಿಗಳ ದಿನಾಚರಣೆ (ಕಾಲಾಯ ತಸ್ಮೈ ನಮಃ)

ಪ್ರತಿ ವರ್ಷ ಫೆಬ್ರುವರಿ ತಿಂಗಳು ಬಂತೆಂದರೆ ವಿಶ್ವದಾದ್ಯಂತ ಯುವ ಜನರಿಗೆ ಹೊಸ ಹುಮ್ಮಸ್ಸು, ಉತ್ಸಾಹ ಎಂದೆಂದೂ ಕಾಣದಷ್ಟು ನವೋಲ್ಲಾಸ. ಕಾರಣ ಫೆಬ್ರುವರಿ ಪ್ರೇಮಿಗಳ ಮಾಸ ಎಂದೇ ಕರೆಯಲ್ಪಟ್ಟ ತಿಂಗಳಾಗಿದೆ.

ಪ್ರೇಮಿಗಳ ದಿನಾಚರಣೆಯನ್ನು ಫೆಬ್ರುವರಿ ತಿಂಗಳಲ್ಲಿಯೇ ಆಚರಿಸಲು ಕಾರಣ ಹೀಗಿದೆ. ರೋಮ ದೇಶದ ಪೌರಾಣಿಕ ಹಿನ್ನೆಲೆಯನ್ನು ಗಮನಿಸಿದರೆ ಶುಕ್ರನ ಮಗನಾದ ಕ್ಯುಪಿಡ್ ಎಂಬ ವ್ಯಕ್ತಿ ಸೌಂದರ್ಯ ಮತ್ತು ಪ್ರೀತಿಗೆ ಹೆಸರಾಗಿದ್ದು ಆತನು ಬಿಲ್ಲಿಗೆ ಬಾಣವನ್ನು ಹೂಡಿ ಹೃದಯಕ್ಕೆ ತಾಗಿಸಿದ.. ಇದನ್ನು ಪ್ರೇಮಿಗಳ ದಿನ ಎಂದು ಕರೆದರು.

ಇನ್ನೊಂದು ಆಖ್ಯಾಯಿಕೆಯ ಪ್ರಕಾರ... 14 ಮತ್ತು 15ನೇ ಶತಮಾನದ ಮಧ್ಯ ಭಾಗದಲ್ಲಿ ಯುದ್ಧ ಪಿಪಾಸುವಾದ ಕ್ಯಾಡಿಲಸ್ ಎಂಬ ರೋಮನ ದೊರೆ ಯುದ್ಧ ಮುಗಿಯುವವರೆಗೆ ತನ್ನ ಸೈನಿಕರಿಗೆ ವಿವಾಹವಾಗಲು ಬಿಡುತ್ತಿರಲಿಲ್ಲ. ಸದಾ ಯುದ್ಧದಲ್ಲಿ ನಿರತರಾಗಿ ಮದುವೆಯಾಗಲು ಸಾಧ್ಯವಾಗದ ಸೈನಿಕರ ವಿವಾಹವನ್ನು ಅವರು ಇಚ್ಚಿಸಿದ ಯುವತಿಯೊಂದಿಗೆ ಗುಟ್ಟಾಗಿ ನಡೆಸಿಕೊಡುತ್ತಿದ್ದ ವ್ಯಕ್ತಿ ಸಂತ ವ್ಯಾಲೆಂಟೈನ್. ಈ ವಿಷಯ ಕ್ಯಾಡಿಲಸ್ ದೊರೆಗೆ ಗೊತ್ತಾಯಿತು. ಕುಪಿತನಾದ ದೊರೆ ಸಂತ ವ್ಯಾಲೆಂಟೈನ್ ನನ್ನು ಗಲ್ಲಿಗೇರಿಸಿದ. ಹಾಗೆ ಆತ ಗಲ್ಲಿಗೇರಿಸಿದ ದಿನ ಫೆಬ್ರುವರಿ 14 ಆಗಿತ್ತು. ಮುಂದೆ ರಾಜನನ್ನು ವಿರೋಧಿಸಿ ಪ್ರತಿ ವರ್ಷ ಫೆಬ್ರುವರಿ 14ನ್ನು ಸಂತ ವ್ಯಾಲೆಂಟೈನ್ ನ ನೆನಪಿನಲ್ಲಿ ಪ್ರೇಮಿಗಳ ದಿನವಾಗಿ ಆಚರಿಸಲು ಆರಂಭಿಸಿದರು.

ಭಾರತ ದೇಶದಲ್ಲಿ ಕೂಡ ಪ್ರೇಮಕ್ಕೆ ಅತ್ಯಂತ ಮಹತ್ವದ ಸ್ಥಾನ ನೀಡಲಾಗಿದೆ. ತಾನು ಪ್ರೀತಿಸಿದ ವ್ಯಕ್ತಿಯ ಬೆರಳು ಕೂಡ ಸೋಕದೆ ಮನದಲ್ಲಿಟ್ಟು ಆರಾಧಿಸುವ ಪ್ಲೆಟಾನಿಕ್ ಲವ್ ನಿಂದ ಹಿಡಿದು, ತಾವು ಪ್ರೀತಿಸಿದ ಸಂಗಾತಿಗೆ ಬರೆದ ಪತ್ರವನ್ನು ಅವರಿಗೆ ಕೊಡುವ ಧೈರ್ಯವಾಗದೆ ತಮ್ಮ ಬಳಿಗೆ ಇಟ್ಟುಕೊಂಡ ಪ್ರೇಮಿಗಳವರೆಗೆ, ಪ್ರೇಮ ನಿವೇದನೆ ಮಾಡದೆ ತಾವು ಪ್ರೀತಿಸಿದ ಯುವತಿ ಮದುವೆಯಾಗಿ ಹೋಗುವುದನ್ನು ನೋಡಿದವರೇ ಬಹಳಷ್ಟು ಜನ. ಅವರ ಪ್ರೀತಿ ಜೀವನದ ಕೊನೆಗಾಲದವರೆಗೂ ಒಂದು ಮಧುರ ನೋವಾಗಿ ಮನಸ್ಸಿನ ಚಾದರದಲ್ಲಿ ಬೆಚ್ಚಗಿರುತ್ತದೆ.

ಶಿವ ಪಾರ್ವತಿಯರ ಕಲ್ಯಾಣಕ್ಕಾಗಿ ತನ್ನನ್ನು ತಾನು ಬಲಿಕೊಟ್ಟುಕೊಂಡ ಅನಂಗನಾದ ಮನ್ಮಥ ಮತ್ತು ರತಿ, ನಳ ಮತ್ತು ದಮಯಂತಿ, ದುಶ್ಯಂತ ಮತ್ತು ಶಕುಂತಲೆ, ರಾಧಾ ಮತ್ತು ಕೃಷ್ಣ ಇವರು ಕೂಡ ಪ್ರೇಮದ ಪತಿ ರೂಪಗಳೇ. ಆದರೆ ಇವರೆಡೆ ನಮಗೆ ಚಿಮ್ಮಿದ್ದು ಭಕ್ತಿ ಭಾವ.

ಹರೆಯದ ವಯಸ್ಸುಗಳಿಗೆ ಪ್ರೀತಿ ಒಂದು ಮಧುರವಾದ ಯಾತನೆ. ವಯೋ ಸಹಜವಾಗಿ ಗಂಡು ಹೆಣ್ಣಿನಲ್ಲಿ ಪರಸ್ಪರ ಇರುವ ಸ್ನೇಹ ಆಕರ್ಷಣೆಯಾಗಿ ಕಾಲಾಂತರದಲ್ಲಿ ಪ್ರೀತಿಯಾಗಿ ಬದಲಾಗುತ್ತದೆ.

ಹರೆಯದ ಬಯಕೆಗಳಿಗೆ ಪ್ರೀತಿಯ ಹೆಸರಿಟ್ಟು ಪ್ರೇಮದ ಅಮಲಿನಲ್ಲಿ ಹುಚ್ಚಾಟಕ್ಕೆ ಬಲಿಯಾಗದೆ ಪ್ರಬುದ್ಧವಾದ ಪ್ರೇಮ ನಿವೇದನೆ ಇರಬೇಕು.ಪ್ರೀತಿ ಪ್ರೇಮವಾಗಿ ಬದಲಾಗುವ ಮುನ್ನ ಪ್ರೇಮಿಗಳು ಹಲವಾರು ಅಗ್ನಿಪರೀಕ್ಷೆಗಳನ್ನು ಎದುರಿಸಿ ತಮ್ಮ ಕಾಲ ಮೇಲೆ ತಾವು ಸ್ವತಂತ್ರವಾಗಿ ನಿಲ್ಲಬೇಕು.... ಕಾಲನ ಒರೆಯಲ್ಲಿ ತಮ್ಮ ಪ್ರೀತಿಯನ್ನು ಪರೀಕ್ಷಿಸಿ ಪಕ್ವವಾಗಿಸಿಕೊಳ್ಳಬೇಕು.

ಇತ್ತೀಚೆಗೆ ಕೊಳ್ಳುಬಾಕ ಸಂಸ್ಕೃತಿಯ ಕಾರಣದಿಂದಾಗಿ ಎಲ್ಲವನ್ನು ಕಮರ್ಷಿಯಲ್ ಆಗಿ ನೋಡುವ ಬಹು ರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ,ಜಾಹೀರಾತಿಗಾಗಿ ಕೆಲ ವಿಶೇಷ ಸಂದರ್ಭಗಳನ್ನು ವಿಶೇಷವಾದ ರಿಯಾಯಿತಿ ಕೊಡುವ ಮೂಲಕ ಹೆಚ್ಚು ಹೆಚ್ಚು ಆಕರ್ಷಣೀಯವಾಗಿ ಆಚರಿಸಲು ಅನುವು ಮಾಡಿಕೊಡುತ್ತಿದ್ದಾರೆ. ಅವುಗಳಲ್ಲಿ ಪ್ರೇಮಿಗಳ ದಿನಾಚರಣೆಯು ಒಂದು. ನಿಜವಾದ ಪ್ರೀತಿ ಪ್ರೇಮಗಳು ಹಿನ್ನೆಲೆಯಲ್ಲಿ ಉಳಿದು ತೋರಿಕೆಯ ಕೇಕ್ ಕಟ್ಟಿಂಗ್, ಅಲಂಕಾರಗಳು, ಇವೆಂಟ್ಗಳನ್ನು, ಪಾರ್ಟಿಗಳನ್ನು ವಿವಿಧ ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿಗಳು ಆಯೋಜಿಸುತ್ತಿದ್ದಾರೆ. ಪ್ರೇಮಿಗಳ ದಿನದಂದು ಪರಸ್ಪರ ಒಬ್ಬರಿಗೊಬ್ಬರು ಉಡುಗೊರೆ ಕೊಟ್ಟುಕೊಳ್ಳುವುದು, ಕ್ಯಾಂಡಲ್ ಲೈಟ್ ಡಿನ್ನರ್ ಮಾಡುವುದು, ಪ್ರವಾಸ ಹೋಗುವುದು, ಮೋಜು–ಮಸ್ತಿಯ ಪಾರ್ಟಿ ಮಾಡುವುದು ಹೀಗೆ ಹತ್ತು ಹಲವು ಯೋಜನೆಗಳನ್ನು ಪ್ರೇಮಿಗಳು ಹಾಕಿಕೊಳ್ಳುತ್ತಾರೆ. ಇತ್ತೀಚೆಗಂತೂ ವಾರಗಟ್ಟಲೆ ವ್ಯಾಲೆಂಟೈನ್ಸ್ ವೀಕ್ ಆಚರಿಸುವ ಪ್ರೇಮಿಗಳ ಸಂಖ್ಯೆ ಹೆಚ್ಚಾಗಿದೆ. ವ್ಯಾಲೆಂಟೈನ್ಸ್ ವೀಕ್ ನಲ್ಲಿ ಪ್ರವಾಸೋದ್ಯಮ ಕೂಡ ಉತ್ತುಂಗವನ್ನು ಕಾಣುತ್ತದೆ.

ಇನ್ನು ಕಾರ್ಪೊರೇಟ್ ಜಗತ್ತಿನಲ್ಲಿ ಬದುಕಿರುವ, ಕೊಳ್ಳುಬಾಕ ಸಂಸ್ಕೃತಿಯ ಶಿಶುಗಳಾಗಿರುವ ಇಂದಿನ ಯುವ ಪೀಳಿಗೆಗೆ ಪ್ರೇಮಿಗಳ ದಿನಾಚರಣೆಯಂದು ತಾವು ಪ್ರೀತಿಸುತ್ತೇವೆ ಎಂದುಕೊಂಡ ವ್ಯಕ್ತಿಗೆ ಹೂವು,ಟೆಡ್ಡಿ ಬೇರ್ ಗಳು,ದುಬಾರಿ ಗಿಫ್ಟ್ ಗಳು,ಮದುವೆಯಾದವರಾದರೆ ತಮ್ಮ ಸಂಗಾತಿಯನ್ನು ಸಂತೋಷಪಡಿಸಲು ಚಿನ್ನ, ಬೆಳ್ಳಿ, ವಜ್ರದ ಪುಟ್ಟ





ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

ಒಡವೆಗಳು, ಕಾರು ಸ್ಕೂಟಿ ಗಳಂತಹ ವಾಹನಗಳನ್ನು, ಐಶಾರಾಮಿ ಜೀವನ ನಡೆಸುವವರು ಅದಕ್ಕಿಂತ ಹೆಚ್ಚಿನ ದುಬಾರಿ ವಸ್ತುಗಳನ್ನು ಕೊಟ್ಟು ತಮ್ಮ ಪ್ರೇಮವನ್ನು ಜಗಜ್ಜಾಹೀರು ಮಾಡಿಕೊಳ್ಳಲು ಫೆಬ್ರುವರಿ ತಿಂಗಳ 14ರಂದು ಜಗತ್ತಿನಾದ್ಯಂತ ಆಚರಿಸಲ್ಪಡುವ ಪ್ರೇಮಿಗಳ ದಿನವನ್ನು ಆರಿಸಿಕೊಳ್ಳುತ್ತಾರೆ. ಇಲ್ಲಿ ಆಚರಣೆಯ ಮುಖ್ಯ ಉದ್ದೇಶ ಆಡಂಬರವೇ ಆಗಿರುತ್ತದೆ. ಪ್ರೀತಿಸಿದ್ದೇವೆ ಎಂಬುದಕ್ಕಿಂತ ಮುಖ್ಯವಾಗಿ ಪ್ರೀತಿಸಿರುವುದನ್ನು ಜಗತ್ತಿಗೆ ಸಾರುವುದಾಗಿರುತ್ತದೆ.

ಬದುಕು ಜಾಹಿರಾತುಗಳಂತಲ್ಲ... ಪ್ರೀತಿ ಪ್ರೇಮಗಳು ಹರೆಯದ ಕಾವಿನ, ಹುಚ್ಚು ಆಕರ್ಷಣೆಯ ಸವಕಲು ನಾಣ್ಯಗಳಲ್ಲ. ಕಣ್ಣು ಕೋರೈಸುವ ದೀಪದ ಅಡಿಯಲ್ಲಿಯೆ ಕತ್ತಲಿರುತ್ತದೆ, ಬಣ್ಣ ಬಣ್ಣದ ಕನಸುಗಳ ಹಿಂದೆ ತಂದೆ ತಾಯಿಯ ತ್ಯಾಗದ ಹೊನಲಿದೆ. ಪ್ರೀತಿ ಕೇವಲ ದೈಹಿಕ ಆಕರ್ಷಣೆಯಲ್ಲ ಪ್ರೀತಿ ಉಡುಗೊರೆಗಳನ್ನು ಬಯಸುವುದಿಲ್ಲ. ಪ್ರೀತಿ ಮನಸುಗಳ ಮಿಲನ... ದೇಹಗಳದ್ದಲ್ಲ ಎಂಬುದನ್ನು ಅರಿತಿರಬೇಕು.

### ಪ್ರೀತಿ ದೈವಿಕವಾದದು

ನಿಜವಾದ ಪ್ರೀತಿಯಲ್ಲಿ ಸ್ವಾರ್ಥವಿರುವುದಿಲ್ಲ. *ನಿಜವಾದ ಪ್ರೀತಿ ಟರ್ಮ್ಸ್ ಅಂಡ್ ಕಂಡೀಶನ್ಸಗಳ ಮೇಲೆ ನಿಂತಿರುವುದಿಲ್ಲ.

ನಿಜವಾದ ಪ್ರೀತಿಗೆ ಎಕ್ಸ್ಪರಿ ಡೇಟ್ ಇರುವುದಿಲ್ಲ. ನಿಜವಾದ ಪ್ರೀತಿ ನೀ ನನಗೆ ಇದ್ದರೆ ನಾ ನಿನಗೆ ಎಂಬ ವ್ಯಾಪಾರಿ ಮನೋಭಾವವನ್ನು ಹೊಂದಿರುವುದಿಲ್ಲ.

ಪ್ರೀತಿಸಲು ಇಬ್ಬರು ಬೇಕು, ನಿಜ ಆದರೆ ಪ್ರೀತಿಯ ಭಾವನೆ ಏಕಮುಖವಾಗಿಯೂ ಇರಬಹುದು. ಪ್ರೀತಿ ಕೆಲವೊಮ್ಮೆ ತ್ಯಾಗವನ್ನು ಬಯಸುತ್ತದೆ, ತಾನು ಪ್ರೀತಿಸುವ ವ್ಯಕ್ತಿ ಸದಾ ಸಂತಸದಿಂದಿರಲಿ ಎಂದು ಹಾರೈಸುವ ಮನಸ್ಥಿತಿ ಪ್ರೀತಿಯಲ್ಲಿ ಇರುತ್ತದೆ, ಇರಬೇಕು ಕೂಡ. ಪ್ರೀತಿಯಲ್ಲಿ ಸಂಕುಚಿತತೆ ಇರಬಾರದು. ಪ್ರೀತಿ ಎಂಬುದು ಕೇವಲ ಗಂಡು ಹೆಣ್ಣಿನ ನಡುವಿನ ಆಕರ್ಷಣೆಯ ಹೆಸರಲ್ಲ. ತಾಯಿ ಮಗುವಿನ ನಡುವಿನ ತಂದೆ ಮಕ್ಕಳ ನಡುವೆ ಇರುವ ಪ್ರೀತಿ ಸ್ವಾರ್ಥ ರಹಿತವಾದುದು. ಅಲ್ಲಿ ಮಕ್ಕಳ ಅಭ್ಯುದಯವನ್ನಷ್ಟೇ ಅವರು ಬಯಸುವುದು. ಪತಿ ಪತ್ನಿ ಅವರ ನಡುವಿನ ಪ್ರೇಮ ಸುಂದರ ದಾಂಪತ್ಯಕ್ಕೇ ಹಿಡಿದ ಕನ್ನಡಿ.

ಪ್ರೀತಿ ಪ್ರಕೃತಿದತ್ತವಾದದು, ಕೆಲವೊಮ್ಮೆ ಪ್ರೀತಿ ತಂತಾನೆ ಹುಟ್ಟುತ್ತದೆ. ಅಲ್ಲಿ ಕಾರಣಗಳು ಬೇಕಾಗುವುದಿಲ್ಲ ಜಾತಿ,ಮತ ಧರ್ಮ, ದೇಶ, ಭಾಷೆಗಳನ್ನು ಮೀರಿ ತಮ್ಮ ಪ್ರೀತಿಯೊಂದಿಗೆ ಜೀವನವನ್ನು ಕಟ್ಟಿಕೊಂಡ ಹಲವಾರು ನಿದರ್ಶನಗಳಿವೆ. ಸೋತವರೂ ಇದ್ದಾರೆ.

ಪ್ರೀತಿಸುವುದು ತಪ್ಪಲ್ಲ ನಿಜ ಆದರೆ ಪ್ರೀತಿಯ ಅಂತಿಮ ಗುರಿ ವಿವಾಹವೇ ಆಗಬೇಕೆಂದಿಲ್ಲ. ಹಾಗೆ ವಿವಾಹವಾಗದಿದ್ದ ಪಕ್ಷದಲ್ಲಿ ತಾವು ಪ್ರೀತಿಸಿದ ವ್ಯಕ್ತಿಯನ್ನು ಮರೆಯಲಾಗದೆ ದುರ್ವ್ಯಸನಗಳಿಗೆ ಈಡಾಗುವುದು ತಪ್ಪು. ಪ್ರತಿಯೊಬ್ಬ ವ್ಯಕ್ತಿಯು ಜೀವನದ ಒಂದಲ್ಲ ಒಂದು ಹಂತದಲ್ಲಿ ಪ್ರೀತಿಯಲ್ಲಿ ಬಿದ್ದೆ ಇರುತ್ತಾನೆ. ಆದರೆ ಪ್ರೀತಿಯಲ್ಲಿ ಎದ್ದು ಗೆದ್ದು ಬದುಕು ಕಟ್ಟಿಕೊಳ್ಳುವವರು ಬೇಕು ಪ್ರೀತಿಯಿಂದ ವಿಮುಖರಾಗಿದ್ದಾಗ್ಯು ತಮ್ಮನ್ನು ಪ್ರೀತಿಸಿದವರ ವ್ಯಕ್ತಿತ್ವಕ್ಕೆ ಕಪ್ಪು ಮಸಿ ಬಳಿಯದೇ ಪ್ರೇಮದ ಪವಿತ್ರತೆಯನ್ನು ಉಳಿಸಬೇಕು. ಪ್ರೀತಿಸಿದ ಎಲ್ಲವೂ ನಮಗೆ ದಕ್ಕುವುದಿಲ್ಲ ಆದರೆ ಪ್ರೀತಿಯ ಸವಿ ನೆನಪುಗಳು ಸದಾ ಮನದಲ್ಲಿ ಹಸಿರಾಗಿ ಉಳಿಯಬೇಕೆಂದರೆ ಪ್ರೀತಿಯನ್ನು ವಿಕೃತವಾಗಿ ಸಬಾರದು. ತನ್ನನ್ನು ಪ್ರೀತಿಸದ ವ್ಯಕ್ತಿಯ ಮೇಲೆ ಆಸಿಡ್ ಹಾಕಿ ವಿರೂಪಗೊಳಿಸುವುದು ಪ್ರೀತಿಯಲ್ಲ. ಪ್ರೀತಿ ಸ್ವಾರ್ಥ ದ್ವೇಷ ಗಳನ್ನು ಅಳಿಸಿ ಹಾಕುವ ಬಂಧಗಳನ್ನು ಜೋಡಿಸುವ ಸೇತುವೆಯಾಗಬೇಕು ಅದುವೇ ನಿಜವಾದ ಪ್ರೀತಿ.

# ಕೈ ಒಳಜಗಳ ಮರೆಮಾಚಲು ನಾಟಕ ಶುರು

## ಕಾಂಗ್ರೆಸ್ ಘೋಷಣೆಗಳು ಈಡೇರಿಸಲಾಗದೆ ಕೇಂದ್ರದ ಮೇಲೆ ಆರೋಪ ಎಂದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

**ಬೆಂಗಳೂರು:** ಕರ್ನಾಟಕದಲ್ಲಿ ಸ್ವತಃ ಉಪ ಮುಖ್ಯಮಂತ್ರಿ ಸೇರಿ ಹಲವಾರು ಶಾಸಕರು ಅಭಿವೃದ್ಧಿಗೆ ಅನುದಾನ ಇಲ್ಲ ಎಂದಿದ್ದಾರೆ. ಕಾಂಗ್ರೆಸ್ಸಿನ ಘೋಷಣೆಗಳು ಅರ್ಥಂಬರ್ಥ ಆಶ್ವಾಸನೆಗಳು. ಅವನ್ನು ಈಡೇರಿಸಲಾಗದೆ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಆಕ್ಷೇಪಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ಬಜೆಟ್ 2.98 ಲಕ್ಷ ಕೋಟಿ ಇದ್ದು, ಫೆಬ್ರವರಿ ಮಧ್ಯಭಾಗಕ್ಕೆ ಬಂದರೂ ಶೇ 38 ರಷ್ಟು ಹಣ ವ್ಯಯಿಸದೆ ಬಾಕಿ ಇದೆ. 1.13 ಲಕ್ಷ ಕೋಟಿ ಹಣ ಖರ್ಚಾಗಿಲ್ಲ. ನಮ್ಮ ಕಡೆ ಒಮ್ಮೆ ಬಂದು ಚೆಕ್ ಮಾಡಿ ಎಂದರಲ್ಲದೆ, ನಮ್ಮಲ್ಲಿ ಪ್ರತಿ ತಿಂಗಳೂ ಪ್ರಧಾನಿಯವರು ಹಣ ಖರ್ಚಾದುದರ ಕುರಿತು ಸಭೆ ನಡೆಸುತ್ತಾರೆ. ಇಲ್ಲಿ ಮಾರ್ಚ್‌ನಲ್ಲಿ ಲೆಕ್ಕ ತೋರಿಸುತ್ತಾರಷ್ಟೇ ಎಂದು ಟೀಕಿಸಿದರು.

ಕೇಂದ್ರ ಪ್ರಾಯೋಜಿತ ವಿವಿಧ ಯೋಜನೆಗಳ ಶೇ 34 ರಷ್ಟು (5,727 ಕೋಟಿ ರೂ) ಹಣ ಖರ್ಚಾಗದೆ ಉಳಿದಿದೆ. ಇದು ರಾಜ್ಯ ಸರ್ಕಾರದ ಡ್ಯಾಶ್ ಬೋರ್ಡಿನ ಮಾಹಿತಿ ಎಂದು ತಿಳಿಸಿದರು. ಕೇಂದ್ರ ಸರ್ಕಾರ ರಾಜ್ಯದ ಕೃಷಿ ಇಲಾಖೆಗೆ ಕೊಟ್ಟ ಹಣವೂ ಸರಿಯಾಗಿ ಖರ್ಚಾಗಿಲ್ಲ. ಪಶು ಚಿಕಿತ್ಸಾಲಯ, ಪಶುಗಳಿಗೆ ಬೇಕಾದ ಔಷಧಿಗೆ ಬೇಡಿಕೆ ಇದೆ. ಆದರೆ, ಆ ಸಂಬಂಧ ಕೇಂದ್ರ ಕೊಟ್ಟ ಅನುದಾನವನ್ನು ಸರಿಯಾಗಿ ಬಳಸಿಲ್ಲ ಎಂದು ಆಕ್ಷೇಪಿಸಿದರು.

ಬರ ಪರಿಹಾರ 2004–05ರಲ್ಲಿ ಸರಕಾರ ಯಾರದಿತ್ತು ಸಿದ್ದರಾಮಯ್ಯನವರೇ? ಮಿಸ್ಟರ್ ಸಿದ್ದರಾಮಯ್ಯ; ಅದು ಯುಪಿಎ ಸರಕಾರ. ಆಗ ನೀವು ಕೇಂದ್ರದಿಂದ ಎಷ್ಟು ಹಣ ಕೇಳಿದ್ದಿರಿ. 2004–05ರಲ್ಲಿ ನಿಮ್ಮ ಸಮ್ಮಿಶ್ರ ಸರಕಾರ ಇತ್ತು. ಆಗ ಧರ್ಮಸಿಂಗ್ ಮುಖ್ಯಮಂತ್ರಿ ಆಗಿದ್ದರು. ಬರ ಸಂಬಂಧ ನೀವು ಕೇಳಿದ್ದು, 1,147 ಕೋಟಿ. 131 ಕೋಟಿ ಬಿಡುಗಡೆ ಆಗಿತ್ತು; ಜಸ್ಟ್ ಶೇ 10 ಎಂದು ಅಂಕಿ ಅಂಶ ನೀಡಿದರು.

2006–07ರಲ್ಲಿ 1,595 ಕೋಟಿ ಕೇಳಿದ್ದು, 340 ಕೋಟಿ ರಿಲೀಸ್ ಆಗಿತ್ತು. 2006ರಲ್ಲಿ ನೆರೆ ಸಂಬಂಧ 406 ಕೋಟಿ ಕೇಳಿದ್ದರು. 249 ಕೋಟಿ ಬಿಡುಗಡೆ ಮಾಡಿದ್ದರು. 2008–09ರಲ್ಲಿ ಬರಗಾಲ ಮತ್ತು ನೆರೆ ಸಂಬಂಧ ಸುಮಾರು 2600 ಕೋಟಿ ಕೇಳಿದ್ದರು. 178 ಕೋಟಿ ಕೊಟ್ಟಿದ್ದಾರೆ. 2004–09 ನಡುವಿನ 5 ವರ್ಷಗಳ ಯುಪಿಎ ಆಡಳಿತದಲ್ಲಿ 15,541 ಕೋಟಿ ಕೇಳಿದ್ದು, 1,524 ಕೋಟಿಯಷ್ಟೇ ರಾಜ್ಯಕ್ಕೆ ಬಿಡುಗಡೆ ಆಗಿತ್ತು ಎಂದು ಹೇಳಿದರು.

ಮುಂಚಿತವಾಗಿಯೇ ಸುಮಾರು 700 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದ ಅವರು, ಪ್ರತಿಯೊಂದು ಹಣಕಾಸು ಆಯೋಗವೂ ಅದರದೇ ಆದ ನಿಯಾಮಾವಳಿ ಹೊಂದಿರುತ್ತದೆ. ಆಯೋಗವು 2016–17ರಲ್ಲಿ ಕರ್ನಾಟಕಕ್ಕೆ ಭೇಟಿ ಕೊಟ್ಟಾಗ ಆ ಸಂದರ್ಭದಲ್ಲಿ ನಮ್ಮ ಸಿದ್ದರಾಮಯ್ಯನವರ ಸರಕಾರವೇ ಇತ್ತು. ಸಿದ್ದರಾಮಯ್ಯನವರ ಸರಕಾರ ಸಮರ್ಪಕ ಮಾಹಿತಿ ಕೊಟ್ಟು ಆಯೋಗಕ್ಕೆ ಮನವರಿಕೆ ಮಾಡುವ ಕೆಲಸ ಮಾಡಿಲ್ಲ. ಹಾಗಾಗಿ ಅದರಲ್ಲಿ ಏನಾದರೂ ದೋಷ ಇದ್ದರೆ ಸಿದ್ದರಾಮಯ್ಯನವರೇ ಹೊಣೆ ಎಂದು ತಿಳಿಸಿದರು.


ಕೇಂದ್ರದ ಯೋಜನೆಗಳಾದ ಜಲ್‌ಜೀವನ್ ಮಿಷನ್, ಮೆಟ್ರೋ, ಸಬ್‌ಅರ್ಬನ್, ಕಿಸನ್ ಸಮ್ಮಾನ್ ಯೋಜನೆ, ಶಿವಮೊಗ್ಗ ವಿಮಾನ ನಿಲ್ದಾಣ, ಏಕಲವ್ಯ ಸ್ಕೂಲ್ ಮತ್ತು ಮೋರಾರ್ಜಿ ದೇಸಾಯಿ ವಸತಿ ಶಾಲೆಗಳು ಈ ಎಲ್ಲಾ ಯೋಜನೆಗಳು ಕೇಂದ್ರದ ಯೋಜನೆಯಾಗಿದ್ದು ಇದು ತಮ್ಮ ಸರ್ಕಾರದ ಯೋಜನೆಗಳು ಎಂದು ರಾಜ್ಯಪಾಲರ ಭಾಷಣದ ಮೂಲಕ ಹೇಳಿಸಿದ್ದಾರೆ.

ಒಂದು ಕಡೆ ಸಂವಿಧಾನ ಓದಲು ಹೇಳಿ ಇನ್ನೊಂದು ಕಡೆ ವಿಭಜನೆಯ ಮಾತುಗಳನ್ನು ಆಡುತ್ತೀರಿ ಎಂದು ಸಿದ್ದರಾಮಯ್ಯ ಅವರ ವಿರುದ್ಧ ಕಿಡಿ ಕಾಡಿದರು. ಸುಳ್ಳು ಹೇಳುವುದರಲ್ಲಿ ಎಕ್ಸ್‌ಪರ್ಟ್.. ಸಿದ್ದರಾಮಯ್ಯನವರು ಸುಳ್ಳು ಹೇಳುವುದರಲ್ಲಿ ಎಕ್ಸ್‌ಪರ್ಟ್. ಅವರು ಸುಳ್ಳುರಾಮಯ್ಯ ಎಂದು ಟೀಕಿಸಿದ ಪ್ರಲ್ಹಾದ್ ಜೋಶಿ ಅವರು, ಕಾಂಗ್ರೆಸ್ಸಿನ ಭರವಸೆಗಳನ್ನು ಈಡೇರಿಸಲು ಅವರಿಗೆ ಆಗುತ್ತಿಲ್ಲ. ತಮ್ಮ ಮತ್ತು ಡಿ. ಕೆ.ಶಿವಕುಮಾರ್ ನಡುವಿನ ಒಳಜಗಳದ ಗಮನವನ್ನು ಬೇರೆಡೆ ತಿರುಗಿಸಲು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ನಾಟಕ ಮಾಡುತ್ತಿದ್ದಾರೆ ಎಂದು ದೂರಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್, ರಾಜ್ಯ ಉಪಾಧ್ಯಕ್ಷರಾದ ಮಾಲವಿಕಾ ಅವಿನಾಶ್, ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಶಾಸಕರುಗಳಾದ ಅಭಯ್ ಪಾಟೀಲ್, ಮಹೇಶ್ ಟೆಂಗಿನಕಾಯಿ ಹಾಗೂ ಎಂ. ಆರ್.ಪಾಟೀಲ್ ಭಾಗವಹಿಸಿದ್ದರು.

**ಕವಿ ಮನಸು**

## ಕೊಂಚ ಸೈರಿಸು ಬಾಲೆ



ಎಳೆಯ ಬಾಲೆಯು ಕರದಲಿರುವುದು
ಎಳೆಯ ಮಾವಿನ ಮಿಡಿಗಳು
ಕಿತ್ತು ತಂದಳೆ,ಹೇಗೆ ದೊರೆಯಿತು
ಮಾವು ಮಿಡಿಗಳ ಗೊಂಚಲು

ಒಂದು ಮಿಡಿಯನು ಬಾಯಲಿಟ್ಟಳು
ಮುದ್ದು ಮುಖದಲಿ ನಗುವಿದೆ
ಮುಗ್ಧ ಬಾಲೆಯು ಮಿಡಿಯ ಕಡಿದರೆ
ಮೇಣವಿರುವುದು ಅರಿಯದೆ?

ಕೊಂಚ ಸೈರಿಸು ಚೂರಿ ಜೊತೆಯಲಿ
ಉಪ್ಪಿನೊಂದಿಗೆ ಬರುವೆನು
ಹೋಳನಾಗಿಸಿ ಉಪ್ಪು ಬೆರೆಯಿಸಿ
ನಿನಗೆ ತಿನ್ನಲು ಕೊಡುವೆನು॥


– ಪೆರ್ಮುಖ ಸುಬ್ರಹ್ಮಣ್ಯ ಭಟ್

**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?




**ತುಂಗಭದ್ರಾ ನೀರಿನ ಮಟ್ಟ**



ಮಂಗಳವಾರ: 13–02–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.95 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 165 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.401 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1611.92 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8355 ಕ್ಯುಸೆಕ್ |
| ಸಾಮರ್ಥ್ಯ | 41.494 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಆತ್ಮವಿಶ್ವಾಸವೇ ಗೆಲುವಿಗೆ ಹಾದಿ

ಮನೆಯೆ ಮಂತ್ರಾಲಯ ಮನಸ್ಸೇ ದೇವಾಲಯ ಎಂಬ ಮಾತಿದೆ. ಆದರೆ ಪ್ರಸ್ತುತದಲ್ಲಿ ಇದು ಎಷ್ಟು ನಿಜವಾಗಿದೆ ಎಂಬುದನ್ನು ಯೋಚಿಸುವ ಪರಿಸ್ಥಿತಿಗೆ ತಲುಪಿರುವುದು ಶೋಚನೀಯ.

ಒಬ್ಬ ವ್ಯಕ್ತಿಗೆ ವಿದ್ಯೆ/ಜ್ಞಾನ ಜೀವನದಲ್ಲಿ ಹೇಗೆ ಬಹುಮುಖ್ಯ ಪಾತ್ರ ವಹಿಸುತ್ತದೆಯೋ, ಆ ವ್ಯಕ್ತಿಯ ಸುತ್ತಮುತ್ತಲಿನ ವಾತಾವರಣವೂ ಅಷ್ಟೇ ಮುಖ್ಯವಾಗಿರುತ್ತದೆ. ಚಿಕ್ಕಂದಿನಿಂದಲೂ ಯಾವುದೇ ಮನುಷ್ಯ, ಯಾವ ಪರಿಸ್ಥಿತಿ ಅಥವಾ ವಾತಾವರಣ ಮತ್ತು ವ್ಯಕ್ತಿಯ ಆದರ್ಶಗಳನ್ನು ನೋಡುತ್ತಾ ಬೆಳೆಯುತ್ತಾನೊ, ಬಹುಪಾಲು ಅವನ ನಂಬಿಕೆ, ಅನಿಸಿಕೆಗಳನ್ನು ಅದೇ ತಳಹದಿಯಲ್ಲಿ ಬೆಳೆಸಿಕೊಂಡಿರುತ್ತಾನೆ.

ಮುಂದೆ ಬದುಕಿನಲ್ಲಿನ ಸಾಸಿರ ಏರಿಳಿತಗಳು ಬಂದಾಗಲು ಅವೆ ನಿಲುವಿನ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಾನೆ. ಇದು ಪೂರಕವು ಆಗಬಹುದು. ಕೆಲವೊಮ್ಮೆ ಮಾರಕವು ಆಗಬಹುದು. depend upon person and the situation.

ಆದರೆ ಬದುಕು ಎಲ್ಲರಿಗೂ ಒಂದೇ ತರಹದ ತಿರುವುಗಳಲ್ಲಿ ತಂದು ನಿಲ್ಲಿಸುವುದಿಲ್ಲ. ಪ್ರತಿಯೊಬ್ಬರ ಬದುಕು ಬೇರೆಯದೇ. ಎಲ್ಲರಿಗೂ ಬಿಸಿ ಮೃಷ್ಟಾನ್ನವೇ ದೊರೆಯುವುದಿಲ್ಲ. ಕೆಲವರಿಗೆ ತಂಗಳು ದಕ್ಕುತ್ತದೆ. ತಂಗಳಿಗು ಒಗ್ಗರಣೆ ಹಾಕಿಕೊಂಡು ಚಪ್ಪರಿಸುವ ಕಲೆ ಗೊತ್ತಿರಬೇಕು. ಅರ್ಥಾತ್ ಸಿಕ್ಕರುವುದರಲ್ಲೇ ಬದುಕು ಕಟ್ಟಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಕಲೆಯನ್ನು ರೂಢಿಸಿಕೊಳ್ಳಬೇಕು. ಕೆಲವರಿಗೆ ಒಂದು ತುತ್ತಿನ ಊಟಕ್ಕೂ ಗತಿಯಿರುವುದಿಲ್ಲ.

ಬದುಕಿನ ಓಣಿಯಲ್ಲಿ ಬರುವ ಪ್ರತಿ ಉಬ್ಬುತಗ್ಗುಗಳನ್ನು ಸಮಸ್ಥಿತಿಯಲ್ಲಿ ಸ್ವೀಕರಿಸಿ ಕಷ್ಟ ಬಂದಾಗ ಕುಗ್ಗದೆ, ಸಿರಿ ಬಂದಾಗ ಹಿಗ್ಗದೆ ಜೀವಿಸುವ ಮನಃಸ್ಥಿತಿಗೆ ನಮ್ಮನ್ನು ನಾವು ತೆರೆದುಕೊಂಡಾಗ ಬದುಕು ಮತ್ತಷ್ಟು ಸುಂದರ ಎನಿಸುತ್ತದೆ. ಜೊತೆಗೆ ನಮ್ಮ ಸುತ್ತಲಿನವರಿಗು ಮತ್ತು ನಮ್ಮ ಮುಂದಿನ ಪೀಳಿಗೆಗು ಇಂತಹ ಬದುಕಿನ ಚಿಕ್ಕ ಚಿಕ್ಕ ಪಾಠಗಳನ್ನು ಮತ್ತು ಆದರ್ಶಗಳನ್ನು ಕಲಿಸುವುದು ಕೂಡ ಈ ಸಮಾಜದ ಭಾಗವಾಗಿ ಬದುಕುತ್ತಿರುವ ನಮ್ಮ ಕರ್ತವ್ಯ / ಧರ್ಮ.

ಈಗೆಲ್ಲ ಆತ್ಮಹತ್ಯೆ, ಕೊಲೆ, ಸುಲುಗೆಗಳಂತ ಹೇಯ ಕೃತ್ಯಗಳು trend ಎಂಬಂತೆ ಹೆಚ್ಚಾಗುತ್ತಿರುವುದಕ್ಕೆ ಬಹುಪಾಲು ಕಾರಣವೆ ಅಸಹಾಯಕತೆ ಮತ್ತು ಖಿನ್ನತೆ. ಬಯಸಿದ್ದೆಲ್ಲ ಸಿಕ್ಕಿಬಿಡಬೇಕೆನ್ನುವ ಹಂಬಲ, ತನಗೆ ದಕ್ಕದ್ದು ಪರರಿಗು ಎಟಕಬಾರದೆನ್ನುವ ಮತ್ಸರ, ಸುಲಭವಾಗಿ ಸಿಕ್ಕು ಪೂರೈಸಿಕೊಂಡ ಅವಶ್ಯಕತೆಯ ನಂತರ ಶುರುವಾಗುವ ಮತ್ತೊಂದು ಬಯಕೆಯ ಸರಪಳಿ, ಇರುವುದರ ನಡುವೆ ಇಲ್ಲದಿರುವಿಕೆಯೆಡೆಗಿನ ಅತಿಯಾದ ಹಪಹಪಿ,



possesivene, ಅತಿಯಾದ ನಿರೀಕ್ಷೆ ಮನುಷ್ಯನಲ್ಲಿನ ತಾಳ್ಮೆಯನ್ನು ಪಾತಾಳಕ್ಕೆ ತಳ್ಳಿಬಿಡುತ್ತದೆ.

ಆಗ ಬಂದದ್ದನ್ನು ಎದುರಿಸುವ ಧೈರ್ಯ ಹಳ್ಳ ಹಿಡಿದು, ಬದುಕಿನ ಬವಣೆಗಳೊಂದಿಗೆ ನೇರಾನೇರ ಸಂಘರ್ಷಕ್ಕೆ ನಿಲ್ಲುವ ಶಕ್ತಿ ಕಮ್ಮಿಯಾಗುತ್ತದೆ. ಅಸಹಾಯಕತೆ ಕ್ರೋಧವನ್ನು, ಕೆಲವೊಮ್ಮೆ ಲೋಭವನ್ನು ಹುಟ್ಟು ಹಾಕುತ್ತದೆ. ಆಗ ಹುಚ್ಚು ಮನಸ್ಸು ಸಲ್ಲದ ಕೆಲಸಕ್ಕೆ ಕೈ ಹಾಕುವಂತೆ ಪ್ರೇರೇಪಿಸಿ ಅಡ್ಡದಾರಿ ಹಿಡಿಸುತ್ತದೆ.

ಬದುಕೇ ವ್ಯರ್ಥ, ಏನಿದೆ ಬದುಕಿನಲ್ಲಿ ಎಂದುಕೊಂಡು ಚಿಕ್ಕ ಚಿಕ್ಕ ಸಮಸ್ಯೆಗಳನ್ನು ಎದುರಿಸಲಾಗದೆ ಸೋತು, ಜವಾಬ್ದಾರಿಗಳಿಂದ ನುಳಿಚಿಕೊಳ್ಳಲೆತ್ನಿಸುವುದರಿಂದ ಬದುಕು ಸುಧಾರಿಸುವುದಿಲ್ಲ. ಭಗವಂತನ ಸೃಷ್ಟಿಯಲ್ಲಿ ವ್ಯರ್ಥವೆನ್ನುವುದೇನು ಇಲ್ಲ. ಬೆಳಗ್ಗೆ ಎದ್ದಾಗ ಮಂದಹಾಸದಿಂದ ನಮ್ಮನ್ನು ಸ್ವಾಗತಿಸುವ ಸೂರ್ಯರಶ್ಮಿಯಿಂದ ಹಿಡಿದು, ನಿತ್ಯ ಚಲಿಸುವ ರಸ್ತೆ, ಅರಳಿ ಘಮಿಸುವ ಹೂಬಳ್ಳಿ, ಗೊತ್ತೇಯಿರದ ದಾರಿಹೋಕ, ಅನುಭವಗಳ ಬಂಢಾರವೆನಿಸುವ ಅಜ್ಜ, ಸೆರಗಿನ ತುದಿಯಲ್ಲಿ ಗಂಟಿಕ್ಕಿಕೊಂಡು ಕೊಡುವ ಅಜ್ಜಿಯ ಕಾಸು, ಜತನದಿಂದ ಬೆಳೆಸುವ ಅಪ್ಪ, ಜೀವ ಕೊಟ್ಟ ಅಮ್ಮ, ಜೀವನ ಕೊಡುತ್ತಿರುವ ಪ್ರಕೃತಿ, ಸಮಾಜ, ಶಿಕ್ಷಕರು, ಸ್ನೇಹಿತರು, ಹುಟ್ಟಿ ಬೆಳೆಯಲು ಆಸರೆಯಾದ ಸೂರು...ಅಬ್ಬಾ !ಮುಗಿಯದ ಈ list ನಲ್ಲಿ ಕೆಲವರಿಗೆ ಕೆಲವು ದಕ್ಕಿರಬಹುದು ಅಥವಾ ಕೆಲವರಿಗೆ ಇವುಗಳ ಕೊರತೆಯಿರಬಹುದು.

ಬದುಕು ಇಷ್ಟೆಲ್ಲಾ ನಮ್ಮ ಪಾಲಿಗೆ ಕೊಟ್ಟಿದ್ದರು ಯಾವುದೋ ಒಂದು ವಸ್ತು/ವ್ಯಕ್ತಿಯ ಕೊರತೆಯ ಕಾರಣದಿಂದ ಬದುಕನ್ನೇ ಅಂತ್ಯಗೊಳಿಸಿಕೊಳ್ಳುವ ಅಥವಾ ಖಿನ್ನತೆಗೆ ಜಾರಿ ಹಾಳುಗೆಡವಿಕೊಳ್ಳುವ ಮನಃಸ್ಥಿತಿಗಳು ಬದಲಾಗಬೇಕು. ಇದಕ್ಕೆಲ್ಲ ಮುಖ್ಯ ಕಾರಣ, ನಾವು ಬೆಳೆವ ವಾತಾವರಣ. ಹಿಂದೆಲ್ಲ ಮನೆಯಲ್ಲಿ ಉತ್ತಮ ಸಂಸ್ಕೃತಿ, ಸಂಸ್ಕಾರ ನೀಡಿ ಮಕ್ಕಳನ್ನು ಬೆಳೆಸುತ್ತಿದ್ದರು. ಕಷ್ಟದ ಪರಿಚಯ ಮಾಡಿಸಿ, ಶ್ರಮದಿಂದ ದಕ್ಕಿದ ಫಲದ ರುಚಿಯ ಅರಿವು ಮೂಡಿಸಿರುತ್ತಿದ್ದರು. ಹಾಗಾಗಿ ಎಂತಹ ಪರಿಸ್ಥಿತಿಯೇ ಬಂದರು ಎದುರಿಸಿ ಬಿಡೋಣ ಅನ್ನುವಂತಹ ಒಂದು healthy ಮೊಂಡುತನ ಬೆಳದು ನಿಂತಿರುತ್ತಿತ್ತು ಮತ್ತು ಅದು ಒಳ್ಳೆಯದೆ.

ನಾನೇನೊ ಸಾಧಿಸಿಬಿಡುತ್ತೇನೆ ಎಂದು ಹೊರಟು, ಮೊದಲ ಪ್ರಯತ್ನದಲ್ಲಿ ಸಿಕ್ಕ ಸಣ್ಣ ಸೋಲಿಗೆ ಕೈಚೆಲ್ಲುವಂತಹ week ಅನ್ನಿಸುವಂತಹ ಮನಃಸ್ಥಿತಿ ಬೆಳೆಯಲು ಬಿಡಬಾರದು. ಎಷ್ಟೇ ಸೋಲುಗಳು ಬಂದರು, ಜಗತ್ತೇ ತಿರುಗಿಬಿದ್ದರು, ಒಳಗೊಂದು ಆತ್ಮವಿಶ್ವಾಸದ ಚಿಲುಮೆ ಉಕ್ಕುತ್ತಲೆ ಇರಬೇಕು. ಇಂತಹ ಆರೋಗ್ಯಕರ ಬೆಳವಣಿಗೆಯನ್ನು ಮೂಡಿಸುವುದು ಮತ್ತು ನಮ್ಮಮುಂದಿನ ಪೀಳಿಗೆಗೆ ಅದನ್ನು ಉಡುಗೊರೆಯಾಗಿ ನೀಡುವುದು ನಮ್ಮೆಲ್ಲರ ಕರ್ತವ್ಯ. ಆದ್ದರಿಂದ ಮನೆಯೇ ಮಂತ್ರಾಲಯ, ಮನಸ್ಸೇ ದೇವಾಲಯ. ಪ್ರತಿ ಜ್ಞಾನ ಮತ್ತು ಶಿಕ್ಷಣದ ಆರಂಭ ಮನೆಯಿಂದಲೇ ಆಗುತ್ತದೆ. ಪರಿಸ್ಥಿತಿ ಮತ್ತು ಮನಸ್ಥಿತಿಗಳು ಉತ್ತಮವಾಗುವಂತಹ ಹವಾಮಾನ ಸೃಷ್ಟಿಸೋಣ ಮತ್ತು ಇರುವ ಸಮಾಜ ಉತ್ತಮನ್ನಾಗಿಸುವ ನಿಟ್ಟಿನಲ್ಲಿ ಬದುಕೋಣ.

– ಪಲ್ಲವಿ ಚೆನ್ನಬಸಪ್ಪ
ಗಡಿಹಳ್ಳಿ ಚಿಕ್ಕಮಗಳೂರು ಜಿಲ್ಲೆ

## ಗ್ರಾಮಗಳಲ್ಲಿಯು ಸಂವಿಧಾನ ಜಾಗೃತಿ

■ ಹಂಪಿ ಟೈಮ್ಸ್ ಕೊಪ್ಪಳ

ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮಮ ಹಿನ್ನೆಲೆಯಲ್ಲಿ ಫೆಬ್ರವರಿ 13ರಂದು 'ಸಂವಿಧಾನ ಜಾಗೃತಿ ಜಾಥಾ' ಮೆರವಣಿಗೆಯು ಜಿಲ್ಲೆಯ ಬೆನ್ನೂರು, ಉಳೇನೂರು, ಯರಡೋಣ, ಸಿದ್ದಾಪೂರ ಹಾಗೂ ಗುಂಡೂರು ಗ್ರಾಮದಲ್ಲಿ ನಡೆಯಿತು.

ಬೆನ್ನೂರು ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಮೆರವಣಿಗೆಗೆ ಬೈಕ್ ರ್‍ಯಾಲಿ ಮೂಲಕ ಚಾಲನೆ ನೀಡಲಾಯಿತು. ಶಾಲಾ ವಿದ್ಯಾರ್ಥಿಗಳು ಹಾಗೂ ದಲಿತ ಹಾಗೂ ವಿವಿಧ ಸಂಘಟನೆಗಳು, ಸಾರ್ವಜನಿಕರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಮೆರವಣಿಗೆ ಕಾರ್ಯ ಕ್ರಮದಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಲಾಯಿತು. ಭಾಷಣಕಾರರು ಸಂವಿಧಾನ



ಪ್ರಸ್ತಾವನೆಯ ಮಹತ್ವದ ಕುರಿತು ಜನರಲ್ಲಿ ತಿಳುವಳಿಕೆ ನೀಡಿದರು. ಸರ್ಕಾರದಿಂದ ನೀಡುವ ಉಚಿತ ಯೋಜನೆಗಳಾದ ಪಡಿತರ ಅಕ್ಕಿ, ಗೃಹಲಕ್ಷ್ಮೀ, ಗೃಹ ಜ್ಯೋತಿ, ಯುವನಿಧಿ ಮತ್ತು ಶಕ್ತಿ ಯೋಜನೆಗಳ ಕುರಿತು ಇದೆ ವೇಳೆ ಸಾರ್ವಜನಿಕರಲ್ಲಿ ತಿಳುವಳಿಕೆ ಹೇಳುವ ಮೂಲಕ ಸಮಾಜದ ಕಟ್ಟ ಕಡೆಯ ವ್ಯಕ್ತಿಗಳು ಸಹಿತ ಈ ಎಲ್ಲಾ ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮನವಿ ಮಾಡಲಾಯಿತು.

## ಫೆ.14 ರಿಂದ ವಾರ್ತಾ ಇಲಾಖೆಯಿಂದ ಬೀದಿ ನಾಟಕ ಪ್ರದರ್ಶನ

■ ಹಂಪಿ ಟೈಮ್ಸ್ ಕೊಪ್ಪಳ

ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತಂತೆ ಪ್ರಚಾರ ಕೈಗೊಳ್ಳಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2023–24ನೇ ಸಾಲಿನಲ್ಲಿ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘ (ರಿ) ಕಲಾತಂಡದ ಮೂಲಕ ಫೆ.14 ರಿಂದ ಫೆ.23 ರವರೆಗೆ ಯಲಬುರ್ಗಾ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬೀದಿ ನಾಟಕ ಕಾರ್ಯಕ್ರಮಗಳು ನಡೆಯಲಿವೆ.

ಫೆ.14 ರಂದು ಬೆಳಿಗ್ಗೆ ಕಲ್ಲೂರು ಹಾಗೂ ಸಂಜೆ ಸಂಗನಾಳದಲ್ಲಿ, ಫೆ.15 ರಂದು ಬೆಳಿಗ್ಗೆ ಹೊಸೂರು ಹಾಗೂ ಸಂಜೆ ಹಿರೇಅರಳಿಹಳ್ಳಿಯಲ್ಲಿ, ಫೆ.16 ರಂದು ಬೆಳಿಗ್ಗೆ ಗುನ್ನಾಳ ಹಾಗೂ ಸಂಜೆ ತಾಳಕೇರಿಯಲ್ಲಿ, ಫೆ.17 ರಂದು ಮಾಟಲದಿನ್ನಿ ಹಾಗೂ ಸಂಜೆ ಕರಮುಡಿಯಲ್ಲಿ, ಫೆ.18 ರಂದು ತೊಂಡಿಹಾಳ ಹಾಗೂ ಸಂಜೆ ಬಳೂಟಗಿಯಲ್ಲಿ, ಫೆ.19 ರಂದು ಬೆಳಿಗ್ಗೆ ಹೊಸಳ್ಳಿ ಹಾಗೂ ಸಂಜೆ ಬಂಡಿಯಲ್ಲಿ, ಫೆ.20 ರಂದು ಬೆಳಿಗ್ಗೆ ಬಸಾಪೂರ ಹಾಗೂ ಸಂಜೆ ಸಂಕನೂರನಲ್ಲಿ, ಫೆ.21 ರಂದು ಬೆಳಿಗ್ಗೆ ಶಿರಗುಂಪಿ ಹಾಗೂ ಸಂಜೆ ಹಿರೇಮ್ಯಾಗೇರಿಯಲ್ಲಿ, ಫೆ.22 ರಂದು ಬೆಳಿಗ್ಗೆ ನಿಟ್ಟಾಲಿ ಹಾಗೂ ಸಂಜೆ ಮಸಬಹಂಚಿನಾಳದಲ್ಲಿ, ಫೆ.23 ರಂದು ಬೆಳಿಗ್ಗೆ ನಿಲೋಗಲ್ ಹಾಗೂ ಸಂಜೆ ಹಿರೇವಂಕಲಕುಂಟಾ ಗ್ರಾಮದಲ್ಲಿ ಬೀದಿ ನಾಟಕ ಕಾರ್ಯಕ್ರಮಗಳು ಜರುಗಲಿದೆ. ಕಲಾವಿದರು ಆಯಾ ಗ್ರಾಮದ ಜನ ಸಂದಣಿ ಸ್ಥಳದಲ್ಲಿ ಸರ್ಕಾರದ ಬೀದಿ ನಾಟಕ ಕಾರ್ಯಕ್ರಮಗಳ ಮೂಲಕ ಸರ್ಕಾರದ ಯೋಜನೆಗಳ ಬಗ್ಗೆ ಪ್ರಚುರಪಡಿಸುವರು. ಆಯಾ ಗ್ರಾಮಸ್ಥರು ಬೀದಿ ನಾಟಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವಂತೆ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ತಿಳಿಸಿದ್ದಾರೆ.

## ಪ್ಲಾಸ್ಟಿಕ್ ವಸ್ತು ವಿಲೇವಾರಿ ಮಾಡಲು ಅರ್ಹ ಏಜೆನ್ಸಿಗಳಿಂದ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದಲ್ಲಿ ವಿವಿಧೆಡೆ ಮಹಾನಗರ ಪಾಲಿಕೆಯಿಂದ ಜಪ್ತಿ ಮಾಡಲಾದ ನಿಷೇಧಿತ ಏಕ ಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ವಿಲೇವಾರಿ ಮಾಡಲು ಅರ್ಹ ಏಜೆನ್ಸಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತ ಖಲೀಲ್ ಸಾಬ್ ಅವರು ತಿಳಿಸಿದ್ದಾರೆ.

ಇತ್ತೀಚಿಗೆ ನಗರದ ಕೆಲವೆಡೆ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಮೇಲೆ ದಾಳಿ ನಡೆಸಿ ಜಪ್ತಿ ಮಾಡಲಾಗಿದ್ದು, ಜಪ್ತಿ ಮಾಡಲಾದ ಪ್ಲಾಸ್ಟಿಕ್ ವಸ್ತುಗಳನ್ನು 'ಎಂಡ್ ಆಫ್ ಲೈಫ್' ಮಾಡಲು ಕೆಎಸ್‌ಪಿಸಿಬಿ ಇಂದ ಅಧಿಕೃತ ಪರವಾನಿಗೆ ಪಡೆದ ಹಾಗೂ ಪ್ಲಾಸ್ಟಿಕ್ ರಿ–ಸೈಕ್ಲರ್ಸ್ ಅಥವಾ ಅಧಿಕೃತ ಸಿಮೆಂಟ್ ಇಂಡಸ್ಟ್ರೀಸ್/ ವೇಸ್ಟ್–ಟು ಎನರ್ಜಿ ಪ್ಲಾಂಟ್ ಜೊತೆ ಒಪ್ಪಂದ ಮಾಡಿಕೊಂಡಿರುವ ಏಜೆನ್ಸಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಪ್ಲಾಸ್ಟಿಕ್‌ನ್ನು ಪಾಲಿಕೆಯಿಂದ ಸಂಗ್ರಹಿಸಿ ಕೆಎಸ್‌ಪಿಸಿಬಿ ನಿಯಮಾನುಸಾರ ಸಿಮೆಂಟ್/ ವೇಸ್ಟ್–ಟು ಎನರ್ಜಿ ಪ್ಲ್ಯಾಂಟ್‌ಗಳಿಗೆ ಸಾಗಿಸಿದ ಪರಿಮಾಣಕ್ಕೆ ಇಪಿಆರ್ ಪಾಯಿಂಟ್ಸ್‌ಗಳನ್ನು ಪಾಲಿಕೆಯ ಖಾತೆಗೆ ವರ್ಗಾಯಿಸಬೇಕು ಹಾಗೂ ಸಂಬಂಧಪಟ್ಟ ಬಳಕೆದಾರರಿಂದ ಸೂಕ್ತ ಪ್ರಮಾಣ ಪತ್ರ ನೀಡಬೇಕು ಎಂದು ಅವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಫೆ.16 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ ಅಥವಾ ದೂ.08392–273479 ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

## ಫೆ.20ಕ್ಕೆ ಸಂತಕವಿ ಸರ್ವಜ್ಞ ಜಯಂತಿ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಸಂತಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮವನ್ನು ಫೆ.20 ರಂದು ಬೆಳಗ್ಗೆ 11.30 ಗಂಟೆಗೆ ನಗರದ ಡಾ.ರಾಜಕುಮಾರ್ ರಸ್ತೆಯ ಬಿ.ಡಿ.ಎ.ಎ ಫುಟ್‌ಬಾಲ್ ಮೈದಾನದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ಉದ್ಘಾಟನೆ ಮಾಡುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗು ಶಾಸಕ ಜೆ.ಎನ್ ಗಣೇಶ್, ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಬಿ.ಎಂ ನಾಗರಾಜ್, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾ ಪೌರರಾದ ಬಿ.ಶ್ವೇತ, ಜಿಲ್ಲಾ ಶಾಲಿವಾಹನ ಕಂಬಾರರ ಸಂಘದ ಅಧ್ಯಕ್ಷ ಪಿ.ವಿ ನರಸಯ್ಯ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಯಂತಿ ಕುರಿತು ಬೆಂಗಳೂರಿನ ಚಿಕ್ಕ ವೀರಯ್ಯ ಟಿ.ಎನ್ ಅವರು ವಿಶೇಷ ಉಪನ್ಯಾಸ ನೀಡುವರು. ಕೆ.ದೊಡ್ಡಬಸವ ಗವಾಯಿ ಅವರಿಂದ ವಚನ ಗಾಯನ ಇರಲಿದೆ. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ್ ಸೇರಿದಂತೆ ಇತರರು ಉಪಸ್ಥಿತರಿರುವರು. ಜಯಂತಿಯ ಅಂಗವಾಗಿ ಮೆರವಣಿಗೆಯು ಹೆಚ್.ಆರ್ ಗವಿಯಪ್ಪ ವೃತ್ತದಿಂದ ಆರಂಭವಾಗಿ ಜಿಲ್ಲಾಧಿಕಾರಿ ಕಚೇರಿ, ಹಳೆ ತಾಲ್ಲೂಕು ಕಚೇರಿ, ಗಡಿಗಿ ಚೆನ್ನಪ್ಪ ವೃತ್ತದ ಮೂಲಕ ಬಿಡಿಎಎ ಫುಟ್‌ಬಾಲ್ ಮೈದಾನದವರೆಗೆ ನಡೆಯಲಿದೆ.

## ಕಾನ್ಸ್‌ಟೇಬಲ್ ಹುದ್ದೆಗೆ ಲಿಖಿತ ಪರೀಕ್ಷೆ, ವಸ್ತ್ರ ಸಂಹಿತೆ ಜಾರಿ

■ ಹಂಪಿ ಟೈಮ್ಸ್ ರಾಯಚೂರು

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸಟೇಬಲ್ (ಸಿವಿಲ್) & (ತೃತೀಯ ಲಿಂಗ ಪುರುಷ) ಹಾಗೂ ಬ್ಯಾಕ್‌ಲಾಗ್–1137 ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳು ಫೆ..25ರಂದು ಬೆಳಿಗ್ಗೆ 11.00 ರಿಂದ 12.30 ಗಂಟೆಯವರೆಗೆ ರಾಜ್ಯಾದ್ಯಂತ ನಡೆಸಲಾಗುತ್ತಿದ್ದು, ಲಿಖಿತ ಪರೀಕ್ಷೆಗೆ ಹಾಜಾರಾಗುವ ಅಭ್ಯರ್ಥಿಗಳು ಕರೆಪತ್ರ ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ಪರೀಕ್ಷೆಗೆ ಹಾಜರಾಗುವಂತೆ ಹಾಗೂ ಕಡ್ಡಾಯವಾಗಿ ವಸ್ತ್ರ ಸಂಹಿತೆಯನ್ನು ಪಾಲಿಸತಕ್ಕದ್ದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರು ತಿಳಿಸಿದ್ದಾರೆ.

ಪುರುಷ ಮತ್ತು ತೃತೀಯ ಲಿಂಗ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಕಡ್ಡಾಯವಾಗಿ ಧರಿಸುವುದು. ಹಾಗೂ ಸಾಧ್ಯವಾದಷ್ಟು ಕಾಲರ್ ರಹಿತ ಶರ್ಟ್‌ಗಳನ್ನು ಧರಿಸುವುದು. ಪರೀಕ್ಷಾ ಕೇಂದ್ರಗಳಲ್ಲಿ ಶ್ಯೂಗಳನ್ನು ನಿಷೇಧಿಸಲಾಗಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸುವುದು. ಕುತ್ತಿಗೆ ಸುತ್ತ ಯಾವುದೇ ಲೋಹದ ಆಭರಣಗಳು ಅಥವಾ ಉಂಗುರ ಮತ್ತು ಕಡಗಗಳನ್ನು ಧರಿಸುವುದು ನಿಷೇಧಿಸಲಾತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ಮತ್ತು ತೃತೀಯಲಿಂಗ ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳು ಹೊಂದಿರುವ ಬಟ್ಟೆಗಳನ್ನು ಧರಿಸುವ್ಯದನ್ನು ನಿಷೇಧಿಸಲಾಗಿದೆ. ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು/ಜೀನ್ಸ್ ಪ್ಯಾಂಟ್ ಧರಿಸಬಾರದು, ಅದರ ಬದಲಿಗೆ ಅರ್ಧ ತೋಳಿನ ಬಟ್ಟೆಗಳನ್ನು ಅವರಿಗೆ ಮುಜುಗರವಾಗದಂತೆ ಅಭ್ಯರ್ಥಿಗಳು ಧರಿಸುವಂತೆ ನಿರ್ದೇಶಿಸಲಾಗಿದ್ದು, ತೆಳುವಾದ ಅಡಿಭಾಗದ ಚಪ್ಪಲಿಗಳನ್ನು ಧರಿಸುವ್ಯದು ಕಡ್ಡಾಯವಾಗಿದೆ. ಮಹಿಳಾ ಮತ್ತು ತೃತೀಯಲಿಂಗ ಮಹಿಳಾ ಅಭ್ಯರ್ಥಿಗಳು (ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ) ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಿದೆ ತಿಳಿಸಿದ್ದಾರೆ.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ಮೈಕ್ರೋ ನ್ಯೂಸ್

## ಗುಂತಕಲ್ ವರೆಗೆ ಪ್ಯಾಸೆಂಜರ್ ರೈಲು ವಿಸ್ತರಣೆ



**ಹಂಪಿ ಟೈಮ್ಸ್ ಹೊಸಪೇಟೆ:** ಹುಬ್ಬಳ್ಳಿ–ಹೊಸಪೇಟೆ–ಬಳ್ಳಾರಿ–ಗುಂತಕಲ್ ನಡುವೆ ಸಂಚರಿಸುತ್ತಿದ್ದ ಗಾಡಿ ಸಂಖ್ಯೆ : 07337/07338 ಪ್ಯಾಸೆಂಜರ್ ರೈಲು ಕಳೆದ 6 ತಿಂಗಳಿಂದ ತೋರಣಗಲ್ಲುವರೆಗೆ ಮಾತ್ರ ಸಂಚರಿಸುತ್ತಿದ್ದು, ವಿಜಯನಗರ ರೈಲ್ವೆ ಅಭಿವೃದ್ಧಿ ಕ್ರಿಯಾ ಸಮಿತಿಯ ಮನವಿಗೆ ಸ್ಪಂಧಿಸಿದ ಇಲಾಖೆಯು ಫೆ.12 ರಿಂದ ಈ ಮೊದಲಿನಂತೆ ತಾತ್ಕಾಲಿಕವಾಗಿ ಗುಂತಕಲ್‌ವರೆಗೆ ವಿಸ್ತರಿಸಲಾಗಿದೆ. ಇದು ಪ್ಯಾಸೆಂಜರ್ ರೈಲು ಆಗಿರುವುದರಿಂದ ಹೊಸಪೇಟೆಯಿಂದ–ಬಳ್ಳಾರಿಗೆ ರೂ.20/– ಗುಂತಕಲ್‌ಗೆ ರೂ.35/– ಹಾಗೂ ಹುಬ್ಬಳ್ಳಿಗೆ ರೂ.35/–ಧರ ನಿಗಧಿಪಡಿಸಲಾಗಿದೆ. ಈ ರೈಲು ಪ್ರತಿದಿನ ಹುಬ್ಬಳ್ಳಿಯಿಂದ ಬೆಳಗ್ಗೆ : 7:45 ರಿಂದ ನಿರ್ಗಮಿಸಿ ಹೊಸಪೇಟೆಗೆ 11:00 ಗಂಟೆಗೆ ಬಳ್ಳಾರಿ 12:20, ಗುಂತಕಲ್‌ಗೆ 2:00 ಗಂಟೆಗೆ ತಲುಪುತ್ತದೆ. ಅಲ್ಲಿಂದ ಮಧ್ಯಾಹ್ನ 2:40ಕ್ಕೆ ನಿರ್ಗಮಿಸಿ ಬಳ್ಳಾರಿ ಮ:3:45, ಹೊಸಪೇಟೆಗೆ ಸಂಜೆ:5.15ಕ್ಕೆ ಆಗಮಿಸಿ ಹುಬ್ಬಳ್ಳಿಯನ್ನು ರಾತ್ರಿ:9:30ಕ್ಕೆ ತಲುಪುತ್ತದೆ. ಬಳ್ಳಾರಿ–ಗುಂತಕಲ್–ಗದಗ್–ಹುಬ್ಬಳ್ಳಿ ಕಡೆಗೆ ಸಂಚರಿಸುವ ಪ್ರಯಾಣಿಕರು ಕಡಿಮೆ ಧರದ ಈ ರೈಲಿನ ಸೌಲಭ್ಯ ಬಳಸಿಕೊಳ್ಳಬಹುದು. ಪ್ರತಿನಿತ್ಯ ವೈದ್ಯಕೀಯ ಚಿಕಿತ್ಸೆ, ಆಸ್ಪತ್ರೆ, ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ, ಸರ್ಕಾರಿ ಕಛೇರಿಗೆ ತೆರಳುವ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ವಿಜಯನಗರ ರೈಲ್ವೆ ಸಮಿತಿಯ ಅಧ್ಯಕ್ಷ ವೈ.ಯಮುನೇಶ, ಕಾರ್ಯದರ್ಶಿ ಮಹೇಶ್ ಕುಡತಿನಿ ತಿಳಿಸಿದ್ದಾರೆ.

# ಮೊಬೈಲ್ ಮೂಲಕ ಕಾರ್ಡ್ ಪಡೆಯಿರಿ

## ಡಿಹೆಚ್‌ಓ ಡಾ.ವೈ.ರಮೇಶ್‌ಬಾಬು ಹೇಳಿಕೆ। ಆಯುಷ್ಮಾನ್ ಭವ ಮೇಳಗಳಲ್ಲಿಯೇ ಸೃಜನೆ ಮಾಡಿ ವಿತರಿಸಲಾಗುತ್ತಿದೆ

**ಹಂಪಿ ಟೈಮ್ಸ್ ಬಳ್ಳಾರಿ**
ಕಡು ಬಡವರು ಸಹಿತ ಉನ್ನತ ಮಟ್ಟದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಪಡೆಯಲು ಸರ್ಕಾರ ರೂಪಿಸಿರುವ "ಆಯುಷ್ಮಾನ್ ಭಾರತ್ – ಪ್ರಧಾನಮಂತ್ರಿ ಜನ ಆರೋಗ್ಯ ಯೋಜನಾ – ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ" ಕಾರ್ಡ್‌ಗಳನ್ನು ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ಮಂಗಳವಾರದಂದು ಹಮ್ಮಿಕೊಳ್ಳುವ ಆಯುಷ್ಮಾನ್ ಭವ ಮೇಳಗಳಲ್ಲಿಯೇ ಸೃಜನೆ ಮಾಡಿ ವಿತರಿಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಜಿಲ್ಲೆಯಲ್ಲಿ ಈವರೆಗೆ 8875 ಕಾರ್ಡ್‌ಗಳನ್ನು ಆಯುಷ್ಮಾನ್ ಭವಃ ಮೇಳಗಳಲ್ಲಿಯೇ ಸೃಜನೆ ಮಾಡಿಕೊಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗಕ್ಕಾಗಿ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ತೆರಳಿ ಕಾರ್ಡ್ ಮಾಡಿಸಿಕೊಳ್ಳುವ ಮೂಲಕ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ವಿನಂತಿಸಿದ್ದಾರೆ.

ಗಂಭಿರ ಆರೋಗ್ಯ ಸಮಸ್ಯೆಗಳ ಚಿಕಿತ್ಸಾ ಸಂದರ್ಭದಲ್ಲಿ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ ರೂ.5 ಲಕ್ಷ ಹಾಗೂ ಎಪಿಎಲ್ ಕುಟುಂಬಗಳಿಗೆ 1.5 ಲಕ್ಷದವರೆಗೆ ಉಚಿತ ಚಿಕಿತ್ಸಾ ವೆಚ್ಚದ ಸೌಲಭ್ಯವನ್ನು ಈ ಕಾರ್ಡ್‌ಗಳಿಂದ ಪಡೆದುಕೊಳ್ಳಬಹುದಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬೆಂಬಲದೊಂದಿಗೆ ಜಿಲ್ಲೆಯಾದ್ಯಂತ ವಿಮ್ಸ್ ಹಾಗೂ ಜಿಲ್ಲಾ ಆಸ್ಪತ್ರೆ ಮತ್ತು ಸ್ಥಳೀಯ ತಜ್ಞ ವೈದ್ಯರುಗಳಿಂದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಮ್ಮ ಕ್ಲಿನಿಕ್‌ಗಳಲ್ಲಿ ಹಾಗೂ ಸಮುದಾಯ ಆರೋಗ್ಯ ಅಧಿಕಾರಿ, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ, ಆರೋಗ್ಯ ನಿರೀಕ್ಷಣಾಧಿಕಾರಿಗಳ ಮೂಲಕ ಉಪಕೇಂದ್ರ – ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಜರುಗಿರುವ ಮೇಳಗಳಲ್ಲಿ ಇಲ್ಲಿಯವರೆಗೆ ಒಟ್ಟು 111536 ಜನ ಭಾಗವಹಿಸಿ ವಿವಿಧ ರೋಗಗಳಿಗೆ ತಪಾಸಣೆ ಮಾಡಿಸಿಕೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಆಯುಷ್ಮಾನ್ ಭವಃ ದಡಿಯಲ್ಲಿ ಇಲ್ಲಿಯವರೆಗೆ ಒಟ್ಟು 2475 ಆರೋಗ್ಯ ಮೇಳಗಳನ್ನು ಆಯೋಜಿಸಲಾಗಿದೆ. ಮೇಳಗಳಲ್ಲಿ 10534 ಗರ್ಭಿಣಿಯರು, ತಪಾಸಣೆ ಮಾಡಿಸಿಕೊಂಡಿದ್ದು, 83436 ಜನಕ್ಕೆ ರಕ್ತದೊತ್ತಡ ಮತ್ತು 79990 ಜನರಿಗೆ ಮಧುಮೇಹ ಪರೀಕ್ಷೆ ಕೈಗೊಳ್ಳಲಾಗಿದೆ.

ಅಲ್ಲದೇ 44216 ಜನರಿಗೆ ಬಾಯಿ ಕ್ಯಾನ್ಸರ್, 13804 ಜನರಿಗೆ ಸ್ತನ ಕ್ಯಾನ್ಸರ್, 7040 ಜನರಿಗೆ ಗರ್ಭಕಂಠದ ಕ್ಯಾನ್ಸರ್ ಪರೀಕ್ಷೆ ಮಾಡಲಾಗಿದೆ. 10514 ಜನರಿಗೆ ನೇತ್ರ ಪರೀಕ್ಷೆ ಮಾಡಲಾಗಿದ್ದು, 11551 ಜನರಿಗೆ ಕ್ಷಯರೋಗದ ಪರೀಕ್ಷೆ ಮಾಡಲಾಗಿದೆ. 7649 ಜನರಿಗೆ ಕುಷ್ಠರೋಗ ಪರೀಕ್ಷೆ ಕೈಗೊಳ್ಳಾಗಿದೆ. 4495 ಜನರಿಗೆ ಕುಟುಂಬ ಕಲ್ಯಾಣದ ವಿಧಾನಗಳ ಸೇವೆಗಳನ್ನು ಒದಗಿಸಲಾಗಿದೆ. ಶಿಬಿರಗಳಲ್ಲಿ ಇ–ಸಂಜೀವಿನಿ ಆಪ್ ಮೂಲಕ ತಜ್ಞ ವೈದ್ಯರನ್ನು ಯಾವುದೇ ಹಣದ ವೆಚ್ಚವಿಲ್ಲದೆ 13955 ಜನ ಸಂಪರ್ಕಿಸಿದ್ದಾರೆ. ಶಿಬಿರದಲ್ಲಿ 8018 ಜನರಿಗೆ ಆಯುಷ್ ಪದ್ದತಿ ಸೇವೆ ನೀಡಲಾಗಿದೆ. ಮೇಳಗಳಲ್ಲಿ 1686 ಆಹಾರ ಪರೀಕ್ಷೆಗಳನ್ನು ಕೈಗೊಳ್ಳಲಾಗಿದೆ.





ಆಯುಷ್ಮಾನ್ ಭಾರತ ಹೆಲ್ತ್ ಅಕೌಂಟ್ ಮಾಡಿಸುವ ಮೂಲಕ ದೇಶದ ಯಾವುದೆ ಭಾಗದಲ್ಲಿ ಚಿಕಿತ್ಸೆಗೆ ತೆರಳಿದರೂ ಸಹ ಸಕಾಲದಲ್ಲಿ ಚಿಕಿತ್ಸೆಯನ್ನು ನೀಡಲು ಸಹಕಾರಿಯಾಗಿದ್ದು, ಪ್ರತಿಯೊಬ್ಬರೂ ತಪ್ಪದೇ ನೋಂದಣಿ ಮಾಡಿಸಬೇಕು ಎಂದು ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಆರೋಗ್ಯ ಮೇಳಗಳ ಯಶಸ್ವಿಗಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಮತ್ತು ತಂಡ ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ಹಾಗೂ ತಾಲ್ಲೂಕ ಆರೋಗ್ಯ ಅಧಿಕಾರಿಗಳು ಸೂಕ್ತ ಮೇಲ್ವಿಚಾರಣೆ ಕೈಗೊಳ್ಳಲಾಗುತ್ತಿದ್ದು, ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಮಾಹಿತಿ ನೀಡುತ್ತಿದ್ದು, ಆರೋಗ್ಯ ಶಿಕ್ಷಣಾಧಿಕಾರಿಗಳು ಆರೋಗ್ಯ ಜಾಗೃತಿ ಕಾರ್ಯ ಕೈಗೊಳ್ಳುತ್ತಿದ್ದಾರೆ. ಸಾರ್ವಜನಿಕರು ಮೇಳಗಳಲ್ಲಿ ಭಾಗವಹಿಸಿ ಆರೋಗ್ಯಯುತ ಬಳ್ಳಾರಿ ಜಿಲ್ಲೆಯನ್ನಾಗಿಸಲು ಸಹಕರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು ಅವರು ಕೋರಿದ್ದಾರೆ.

**ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ ಜಾಗೃತಿ:** ಮೇಳಗಳಲ್ಲಿ ಹೆಣ್ಣುಭ್ರೂಣ ಹತ್ಯೆ ತಡೆಗಟ್ಟುವಿಕೆಗಾಗಿ ಪ್ರತಿಯೊಬ್ಬರಿಗೂ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ 1994ರ ಕುರಿತು ಜಾಗೃತಿಯನ್ನು ನೀಡಲಾಗುತ್ತಿದ್ದು, ಭ್ರೂಣಲಿಂಗ ಪತ್ತೆಗೆ ಸಂಬಂಧಿಸಿದ ಯಾವುದೇ ಜಾಹೀರಾತುಗಳಿಗೆ 3 ವರ್ಷ ಜೈಲು ಶಿಕ್ಷೆ, ರೂ.10 ಸಾವಿರ ದಂಡ ಇದೆ. ವೈದ್ಯರು ಭ್ರೂಣಲಿಂಗ ಪತ್ತೆ ಮಾಡಿದಲ್ಲಿ ಮೊದಲ ಅಪರಾಧಕ್ಕೆ 3 ವರ್ಷ ಜೈಲು ಶಿಕ್ಷೆ ರೂ.10 ಸಾವಿರ ದಂಡ ಮತ್ತು 2ನೇ ಬಾರಿ ಅಪರಾಧಕ್ಕೆ 5 ವರ್ಷ ಜೈಲು ಶಿಕ್ಷೆ ರೂ.50 ಸಾವಿರ ದಂಡವಿದೆ. ಅಲ್ಲದೇ ಗರ್ಭಿಣಿ ಮಹಿಳೆಗೆ ಕುಟುಂಬದ ಸದಸ್ಯರು ಭ್ರೂಣಲಿಂಗ ಪತ್ತೆಗೆ ಒತ್ತಾಯಿಸಿದರೆ. ಮೊದಲ ಅಪರಾಧಕ್ಕೆ 3 ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ.ದಂಡ, ಪುನಃ 2ನೇ ಬಾರಿ ಭ್ರೂಣಲಿಂಗ ಪತ್ತೆ ಮಾಡಿಸಿದಲ್ಲಿ 5 ವರ್ಷ ಜೈಲು ಶಿಕ್ಷೆ ರೂ.1 ಲಕ್ಷ ದಂಡವಿದೆ ಎಂದಿದ್ದಾರೆ.

# ಅಂಬೇಡ್ಕರ್ ಅವರ ಕನಸು ನನಸಾಗಿಸಿ



**ಹಂಪಿ ಟೈಮ್ಸ್ ಹರಪನಹಳ್ಳಿ**
ಅವಿಧ್ಯಾವಂತರಿಗೆ ಸಂವಿಧಾನದ ಮೂಲಭೂತ ಹಕ್ಕುಗಳ ಬಗೆಗೆ ಅರಿವು ಮೂಡಸಿ ಡಾ ಬಿ ಆರ್ ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ನಾವೆಲ್ಲರೂ ನಮ್ಮ ದಿನ ನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳ ಬೇಕು ನಮ್ಮ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಮೂಲಕ ಕಟ್ಟ ಕಡೆಯ ಶೋಷಿತ ಸಮಾಜದಿಂದ, ಮುಖ್ಯ ವಾಹಿನಿಗೆ ತರುವ ಇಚ್ಚೆಯಿಂದ ಅಂಬೇಡ್ಕರ್ ಅವರು ಸಂವಿಧಾನವನ್ನು
ರಚಿಸಿದ್ದಾರೆ,ಅದುನ್ನು ನಾವೆಲ್ಲರೂ ಅರಿತು ಕೊಳ್ಳುವ ಅಗತ್ಯವಿದೆ. ಸಮಾಜದಲ್ಲಿ ನಾವೆಲ್ಲರೂ ಒಂದೇ, ಎಲ್ಲರಿಗೂ ಶಿಕ್ಷಣವನ್ನು ಪಡೆಯುವ ಹಕ್ಕು ಇದೆ ಸಮಾ ಜ ಕಲ್ಯಾಣ ಇಲಾಖೆ ಅಧಿಕಾರಿ ರೇಣುಕಾದೇವಿ ತಿಳಿಸಿದರು.
ಬಾಗಳಿ ಗ್ರಾಮದಿಂದ ಪಟ್ಟಣದ ಹೊಸಪೇಟೆ ರಸ್ತೆ ಮಾ ರ್ಗದಿಂದ ಮಂಗಳವಾರ ಸಂವಿಧಾನ ಜಾಗೃತಿ ಜಾಥಾ ವನ್ನು ಪಟ್ಟಣದ ವಿವಿಧ ಶಾಲೆಗಳಿಂದ ಆಗಮಿಸಿದ ಮಕ್ಕಳು .ಕಂದಾಯ ಇಲಾಖೆ. ಪುರಸಭೆ. ಸಮಾಜ ಕಲ್ಯಾಣ ಇಲಾಖೆ. ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಜೆಸಿಐ ಸಂಘಟನೆಯ ಕಾರ್ಯಕರ್ತರು ,ಅದ್ದೂರಿ ಸ್ವಾಗತದ ಮೂಲಕ ಬರಮಾಡಿಕೊಂಡರು.
ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ಮುಖ್ಯ ದ್ವಾ ರದಿಂದ ಆರಂಭಗೊಂಡ ಜಾಥಾ ಐ ಬಿ ವೃತ್ತದ ವೇದಿಕೆಯನ್ನು ತಲುಪಿತು. ಸೋಮವಾರ ದಿಂದ ಪ್ರಾ ರಂಭಗೊಂಡ ಸಂವಿಧಾನ ಜಾಥಾವ ತೊಗರಿಕಟ್ಟೆ. ಮಾಡಲಗೇರಿ.ಕೂಲಹಳ್ಳಿ ಹಾಗೂ ಬಾಗಳಿ ಗ್ರಾಮಗಳ ಮೂಲಕ ಪಟ್ಟಣಕ್ಕೆ ಆಗಮಿಸಿತು. ಅರ್ಜುನ್ ಪರಸಪ್ಪ ಸಂಗೀತಾ ಕಲಾ ತಂಡದಿಂದ ಜಾಗೃತಿ ಗೀತೆಯ ಮೂಲಕ ಕಾರ್ಯ ಕ್ರಮಕ್ಕೆ ಚಾಲನೆ ನೀಡಲಾಯಿತು.
ಡಾ.ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ, ನಿಚ್ಚ ವ್ವನಹಳ್ಳಿ ಭೀಮಪ್ಪ ಮಾತನಾಡಿ, ನಮ್ಮ ಸಂವಿಧಾನ ರಚನೆಗೊಂಡು 75 ವರ್ಷಗಳು ಆಗಿವೆ, ಇಂದಿಗೂ ಕೂಡ ಸಮಾಜದಲ್ಲಿ ಸಮಾನತೆಯನ್ನು ಕಾಣುವಲ್ಲಿ ನಾವೆಲ್ಲರೂ ವಿಫಲರಾಗಿದ್ದೇವೆ. ಮೇಲು ಕೀಳೆಂಬ ಭಾವನೆಗಳನ್ನು ನಾವು ಹೋಗಲಾಡಿಸಿದಾಗ ಮಾತ್ರ ಅಂಬೇಡ್ಕರ್ ಅವರ ಕನಸು ನನಸಾಗಿಸಲು ಸಾಧ್ಯ. ಅಂಬೇಡ್ಕರ್ ಅವರನ್ನು ದೂರವ ಬದಲು ಅವರ ಸಂವಿಧಾನವನ್ನು ಎಲ್ಲರೂ ಅರಿತು ಕೊಳ್ಳುವ ಅಗತ್ಯ ವಿದೆ ಎಂದರು ವಿವಿಧ ಸ್ಪರ್ಧೆ ಗಳಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು
ಸಾರಿಗೆ ಘಟಕ ವ್ಯವಸ್ಥಾಪಕಿ ಮಂಜುಳ. ತಾಲೂಕು ಆರೋಗ್ಯಧಿಕಾರಿ ಡಾ. ಹಾಲಸ್ವಾಮಿ.ಸಮಾಜ ಪುರಸಭೆಯ ಆರೋಗ್ಯ ಅಧಿಕಾರಿ ಮಂಜುನಾಥ್.
ಕಲ್ಯಾಣ ಇಲಾಖೆಯ ವಾರ್ಡನ್ ಗಾಳದ ಬಸವರಾಜ, ಚಂದ್ರಪ್ಪ .ಪಿಎಸ್ ಐ ಶಂಭುಲಿಂಗಯ್ಯ ಸಿ ಹಿರೇಮಠ್. ಭೀಮವಾದ ಸಂಘಟನೆಯ ಅಧ್ಯಕ್ಷ ಕೆ ಸುಭಾಷ್. ಮಾಳಗಿ ರಮೇಶ್. ಬಿ ನಾಗರಾಜ್. ಪೂಜಾರ್ ನಿಂಗಪ್ಪ. ಬಿ ಚಂದ್ರಪ್ಪ. ಸಿ ಪ್ರಕಾಶ್. ಜೆಸಿಐ ಸಂಘಟನೆ ಅಧ್ಯಕ್ಷರಾದ ಚಲುವಾದಿ ಪರುಶರಾಮ್. ಮೋರಿಗೇರೆ ಹೇಮಣ್ಣ.ವಿಜಯಲಕ್ಷ್ಮಿ . ದೈಹಿಕ ಪರಿವೀಕ್ಷಕರಾದ ಷಣ್ಮುಖಪ್ಪ. ಶಾಂತದೇವಿ ಉಳ್ಳಾಲ, ಪುರಸಭೆಯ ಸಿಬ್ಬಂದಿ ವರ್ಗದವರು, ಹಾಗೂ ವಿವಿಧಶಾಲೆಗಳಿಂದ ಆಗಮಿಸಿದ ವಿಧ್ಯಾರ್ಥಿಗಳು ಭಾಗವಹಿಸಿದರು.

## ಹೆಸರು ಬದಲಾವಣೆ

ನಾನು ಅಂದರೆ ಟಿ.ಮಂಜುಳ ಗಂಡ ಲೇಟ್ ಟಿ.ನರೇಶ್, ವಯಸ್ಸು 43 ವರ್ಷ, ವಾಸ: 35ನೇ ವಾರ್ಡ್, ಪಾರ್ವತಿ ನಗರ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.
ನನ್ನ ಮಗಳ ಹೆಸರು ಎನ್.ಟಿ.ಖಾಸ್ವಿ **( N T KHASVI )** ಹೆಸರಿಗೆ ಬದಲಾಗಿ ಟಿ.ಎನ್.ಶೀತಲ್, ತಂದೆ ಹೆಸರು ನರೇಶ್ ಟಿ ಎಂದು ಜನನ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ. ನನ್ನ ಮಗಳ ಹೆಸರು ಎನ್.ಟಿ.ಖಾಸ್ವಿ **N T KHASVI** ಜನ್ಮ ದಿನಾಂಕ: 04–03–2008, ತಂದೆ: ಟಿ.ನರೇಶ **T NARESH,** ತಾಯಿ: ಟಿ.ಮಂಜುಳ **T MANJULA,** ಮಗಳ ಮತ್ತು ತಂದೆಯ ಹೆಸರನ್ನು ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ತಿದ್ದುಪಡಿ ಮಾಡಿ ನೀಡಬೇಕೆಂದು ದಿನಾಂಕ 13–02–2024 ರಂದು ನೋಟರಿ ಚಂದ್ರಶೇಖರ ಪಿ.ಯಲಗೋಡ್ ಸಮ್ಮುಖದಲ್ಲಿ ಪ್ರಮಾಣೀಕರಿಸಿದ್ದೇನೆ.







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA